Re. No. D. 221

सत्यमेव जयते

# भारत का राजपत्र
# The Gazette of India
# ಭಾರತ ರಾಜಪತ್ರ

**( EXTRAORDINARY )**
( ವಿಶೇಷ ಸಂಚಿಕೆ )

भाग IX — अनुभाग 1
PART IX — SECTION 1
ಭಾಗ IX — ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.

| | | | |
|---|---|---|---|
| सं. १ | नई दिल्ली, गुरुवार, जून ४, २०२० | ज्येष्ठ २२, १९४२ (शका) | खंड ४९ |
| No. 1 | New Delhi, Thursday, June 4, 2020 | Jyeshta 22, 1942 (Saka) | Vol. 49 |
| ನಂ. ೧ | ನವ ದೆಹಲಿ, ಗುರುವಾರ, ಜೂನ್ ೪, ೨೦೨೦ | ಜ್ಯೇಷ್ಠ ೨೨, ೧೯೪೨ (ಶಕ) | ಸಂಪುಟ ೪೯ |


**Ministry of Law and Justice**
Legislative Department
New Delhi, 04th June, 2020

ಕಾನೂನು ಮತ್ತು ನ್ಯಾಯ ಮಂತ್ರಾಲಯ
ವಿಧಾಯೀ ಇಲಾಖೆ
**ನವದೆಹಲಿ, 04ನೇ ಜೂನ್ 2020**

The Translation in Kannada of the following Acts, namely:- (1) The Public Debt Act, 1944 (18 of 1944) (2) The Dock Workers (Safety, Health and Welfare) Act, 1986 (54 of 1986) (3) The Building and Other Construction Workers' (Regulation of Employment and Conditions of Service) Act, 1996 (27 of 1996) (4) The Building and Other Construction Worker's Welfare Cess Act, 1996 (28 of 1996) (5) The Petroleum and Natural Gas Regulatory Board Act, 2006 (19 of 2006) (6) The Warehousing (Development and Regulation Act), 2007 (37 of 2007) (7) The Carriage by Road Act, 2007 (41 of 2007) (8) The Collection of Statistics Act, 2008 (7 of 2009) (9) The Protection of Children from Sexual Offences Act, 2012 (32 of 2012) (10) The Prohibition of Employment as Manual Scavengers and their Rehabilitation Act, 2013 - are hereby published under the authority of the President and shall be deemed to be authoritative text thereof in Kannada under clause (a) of Section 2 of the Authoritative Texts (Central Laws) Act, 1973 (50 of 1973)

# ಮಲಹೊರುವ ಜಾಡಮಾಲಿಗಳ ನಿಯೋಜನೆ ನಿಷೇಧ ಮತ್ತು ಪುನರ್ವಸತಿ ಅಧಿನಿಯಮ, 2013

**(2013ರ ಅಧಿನಿಯಮ ಸಂಖ್ಯೆ 25)**

**[18ನೇ ಸೆಪ್ಟೆಂಬರ್, 2013]**

ಮಲಹೊರುವ ಜಾಡಮಾಲಿಗಳ ನಿಯೋಜನೆಯನ್ನು ನಿಷೇಧಿಸುವುದಕ್ಕಾಗಿ, ಮಲಹೊರುವ ಜಾಡಮಾಲಿಗಳಿಗೆ ಮತ್ತು ಅವರ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.

ನಾಗರಿಕರಲ್ಲಿ ವ್ಯಕ್ತಿ ಗೌರವವನ್ನು ಸುನಿಶ್ಚಿತಗೊಳಿಸಿ, ಅವರಲ್ಲಿ ಭ್ರಾತೃ ಭಾವನೆಯನ್ನು ವೃದ್ಧಿಗೊಳಿಸುವುದು ಸಂವಿಧಾನದ ಪ್ರಸ್ತಾವನೆಯಲ್ಲಿ ಹೇಳಿರುವ ಗುರಿಗಳಲ್ಲಿ ಒಂದಾಗಿರುವುದರಿಂದ;

ಮತ್ತು ಗೌರವಯುತವಾಗಿ ಬದುಕುವ ಹಕ್ಕನ್ನು ಸಂವಿಧಾನದ IIIನೇ ಭಾಗದಲ್ಲಿ ಇರುವ ಮೂಲಭೂತ ಹಕ್ಕುಗಳಲ್ಲಿ ಖಾತ್ರಿಪಡಿಸಿರುವುದರಿಂದ;

ಮತ್ತು, ಸಂವಿಧಾನದ 46ನೇ ಅನುಚ್ಛೇದದಲ್ಲಿ, ಇತರ ವಿಷಯಗಳ ಜೊತೆಗೆ, ರಾಜ್ಯವು ತನ್ನಲ್ಲಿರುವ ದುರ್ಬಲ ವರ್ಗಗಳಿಗೆ ಮತ್ತು ಅದರಲ್ಲೂ ವಿಶೇಷವಾಗಿ ಸಾಮಾಜಿಕವಾಗಿ ಅನ್ಯಾಯಕ್ಕೆ ಹಾಗೂ ಎಲ್ಲಾ ರೀತಿಯ ಶೋಷಣೆಗಳಿಗೆ ಒಳಗಾದ ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ರಕ್ಷಣೆ ಒದಗಿಸಬೇಕೆಂದು ತಿಳಿಸಿರುವುದರಿಂದ;

ಮತ್ತು ದೇಶದ ಅನೇಕ ಭಾಗಗಳಲ್ಲಿ ಮಲಹೊರುವ ಅಮಾನವೀಯ ಪದ್ಧತಿಯು ಇನ್ನೂ ಜೀವಂತವಾಗಿರುವುದರಿಂದ, ನೈರ್ಮಲ್ಯರಹಿತ ಶೌಚಾಲಯಗಳು ಇನ್ನೂ ಹಾಗೆಯೇ ಅಸ್ತಿತ್ವದಲ್ಲಿರುವುದರಿಂದ ಮತ್ತು ಅತ್ಯಂತ ಹೀನಾಯ ಜಾತಿಪದ್ಧತಿ ಇರುವುದರಿಂದ ಮತ್ತು ನೈರ್ಮಲ್ಯರಹಿತ ಶೌಚಾಲಯ ಹಾಗೂ ಮಲಹೊರುವ ಜಾಡಮಾಲಿ ಎಂಬ ಎರಡು ಅನಿಷ್ಠ ಪದ್ಧತಿಗಳನ್ನು ಸಮಾಜದಿಂದ ಇನ್ನಿಲ್ಲದಂತೆ ನಿರ್ಮೂಲನೆ ಮಾಡಲು ಪ್ರಸ್ತುತ ಅಸ್ತಿತ್ವದಲ್ಲಿರುವ ಕಾನೂನುಗಳು ಸಮರ್ಪಕವಾಗಿಲ್ಲದಿರುವುದರಿಂದ;

ಮತ್ತು ಮಲಹೊರುವ ಜಾಡಮಾಲಿಗಳಿಗೆ ಆಗಿರುವ ಐತಿಹಾಸಿಕ ಅನ್ಯಾಯವನ್ನು ಮತ್ತು ಅಗೌರವದ ಬದುಕನ್ನು ಸರಿಪಡಿಸುವುದಕ್ಕೆ ಮತ್ತು ಅವರು ಗೌರವಯುತ ಬದುಕನ್ನು ನಡೆಸುವುದಕ್ಕೆ ಅವರಿಗೆ ಪುನರ್ವಸತಿ ಕಲ್ಪಿಸುವುದು ಅತ್ಯಾವಶ್ಯಕವಾಗಿರುವುದರಿಂದ.

ಇದು ಭಾರತ ಗಣರಾಜ್ಯದ ಅರವತ್ತನಾಲ್ಕನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

## ಅಧ್ಯಾಯ-I

### ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1)ಈ ಅಧಿನಿಯಮವನ್ನು ಮಲಹೊರುವ ಜಾಡಮಾಲಿಗಳ ನಿಯೋಜನೆ ನಿಷೇಧ ಮತ್ತು ಪುನರ್ವಸತಿ ಅಧಿನಿಯಮ, 2013 ಎಂದು ಕರೆಯತಕ್ಕದ್ದು.

(2) ಇದು, ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು, ಕೇಂದ್ರ ಸರ್ಕಾರವು, ಅಧಿಕೃತ ರಾಜಪತ್ರದಲ್ಲಿ ಸದರಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ *ದಿನಾಂಕದಂದು ಜಾರಿಗೆ ಬರತಕ್ಕದ್ದು:

ಪರಂತು, ಹಾಗೆ ಅಧಿಸೂಚಿಸಿದ ದಿನಾಂಕವು ಅಧಿಕೃತ ರಾಜಪತ್ರದಲ್ಲಿ ಅಂಥ ಅಧಿಸೂಚನೆ ಪ್ರಕಟವಾದ ದಿನಾಂಕದ ನಂತರ ಅರವತ್ತು ದಿನಗಳಿಗಿಂತ ಮುಂಚಿತ ದಿನಾಂಕವಾಗಿರತಕ್ಕದ್ದಲ್ಲ.

**2. ಪರಿಭಾಷೆಗಳು.-** (1) ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಏಜೆನ್ಸಿ" ಎಂದರೆ ಸ್ಥಳೀಯ ಪ್ರಾಧಿಕಾರವನ್ನು ಹೊರತುಪಡಿಸಿ, ಯಾವುದೇ ಪ್ರದೇಶದಲ್ಲಿ ನೈರ್ಮಲ್ಯ ಸೌಕರ್ಯಗಳನ್ನು ಒದಗಿಸುತ್ತಿರುವ ಯಾವುದೇ ಏಜೆನ್ಸಿ ಮತ್ತು ಇದರಲ್ಲಿ ರಿಯಲ್ ಎಸ್ಟೇಟ್‌ನ ಅಭಿವೃದ್ಧಿ ಮತ್ತು ನಿರ್ವಹಣೆಯಲ್ಲಿ ತೊಡಗಿರುವ ಗುತ್ತಿಗೆದಾರ ಅಥವಾ ಫರ್ಮು ಅಥವಾ ಕಂಪನಿಯೂ ಒಳಗೊಳ್ಳುತ್ತದೆ;

(ಬಿ) ದಂಡುಪ್ರದೇಶದ ಮಂಡಲಿಗಳಿಗೆ, ರೈಲ್ವೆ ಭೂಮಿಗಳಿಗೆ ಮತ್ತು ಕೇಂದ್ರ ಸರ್ಕಾರದ ಒಡೆತನವಿರುವ ಭೂಮಿಗಳಿಗೆ ಮತ್ತು ಕಟ್ಟಡಗಳಿಗೆ, ಕೇಂದ್ರ ಸಾರ್ವಜನಿಕ ವಲಯ ಉದ್ಯಮಕ್ಕೆ ಅಥವಾ ಕೇಂದ್ರ ಸರ್ಕಾರವು ನೀಡುವ ಸಂಪೂರ್ಣ ಅಥವಾ ಗಣನೀಯ ಹಣದಿಂದ ನಡೆಯುತ್ತಿರುವ ಸ್ವಾಯತ್ತ ಸಂಸ್ಥೆಗೆ ಸಂಬಂಧಿಸಿದಂತೆ "ಸಮುಚಿತ ಸರ್ಕಾರ" ಎಂದರೆ ಕೇಂದ್ರ ಸರ್ಕಾರ ಮತ್ತು ಇತರ ಎಲ್ಲ ಪ್ರಕರಣಗಳ ಸಂಬಂಧದಲ್ಲಿ ರಾಜ್ಯ ಸರ್ಕಾರ;

(ಸಿ) ಪುರಸಭೆ ಅಥವಾ ಪಂಚಾಯತಿಗೆ ಸಂಬಂಧಿಸಿದಂತೆ "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ" ಎಂದರೆ ಯಾವುದೇ ಹೆಸರಿನಿಂದ ಕರೆಯಲಾಗುವ ಅವುಗಳ ಅತ್ಯಂತ ಹಿರಿಯ ಕಾರ್ಯನಿರ್ವಾಹಕ ಅಧಿಕಾರಿ;

* ಡಿಸೆಂಬರ್ 6, 2013ರಿಂದ ಜಾರಿಗೆ ಬಂದಿದೆ. ಅಧಿಸೂಚನೆ ಸಂಖ್ಯೆ: ಎಸ್.ಓ. 2989 (E) ದಿನಾಂಕ: 1ನೇ ಅಕ್ಟೋಬರ್ 2013, ಭಾರತ ಸರ್ಕಾರದ ವಿಶೇಷ ಗೆಜೆಟ್ ಭಾಗ –II ವಿಭಾಗ 3(ii)

(ಡಿ) ಒಳಚರಂಡಿಯಲ್ಲಿ ಅಥವಾ ರೊಚ್ಚುತೊಟ್ಟಿಯಲ್ಲಿ ನೌಕರನು "ಅಪಾಯಕಾರಕ ಸ್ವಚ್ಛತೆ ಕಾರ್ಯ" ಎಂದರೆ, ಆತನ ನಿಯೋಜಕನು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಅದರ ಮೇರೆಗೆ ರಚಿತವಾದ ನಿಯಮಗಳ ಅಡಿಯಲ್ಲಿ ನಿಯಮಿಸಬಹುದಾದ ಅಥವಾ ಉಪಬಂಧಿಸಬಹುದಾದ ರೀತಿಯಲ್ಲಿ ಸಂರಕ್ಷಣಾ ಸಾಧನವನ್ನು ಹಾಗೂ ಇತರ ಸ್ವಚ್ಛತಾ ಸಾಧನಗಳನ್ನು ಒದಗಿಸುವ ಮತ್ತು ಸುರಕ್ಷಾ ಮುನ್ನೆಚ್ಚರಿಕೆ ಕ್ರಮಗಳ ಪಾಲನೆ ಆಗಿರುವುದನ್ನು ಖಚಿತಪಡಿಸಿಕೊಳ್ಳುವ ತನ್ನ ಹಕ್ಕುಬಾಧ್ಯತೆಗಳನ್ನು ಈಡೇರಿಸದೆ ಅಂಥ ನೌಕರನಿಂದ ದೈಹಿಕವಾಗಿ ಅದನ್ನು ಸ್ವಚ್ಛಗೊಳಿಸುವ ಕೆಲಸ ಮಾಡಿಸುವುದು;

(ಇ) "ಶುಚಿಯಾಗಿಲ್ಲದ ಶೌಚಾಲಯ" ಎಂದರೆ, ಮಲಮೂತ್ರವು ಸಂಪೂರ್ಣವಾಗಿ ಕೊಳೆತು ನಾರುವುದಕ್ಕೂ ಮುಂಚೆ ನಿಯಮಿಸಬಹುದಾದಂಥ ರೀತಿಯಲ್ಲಿ ಮಾನವನ ಮಲಮೂತ್ರಗಳನ್ನು ಸ್ವಚ್ಛ ಮಾಡಬೇಕಾಗಿರುವ ಅಗತ್ಯತೆ ಇರುವ ಅಥವಾ ಅನ್ಯಥಾ ವಿಲೇ ಮಾಡಬೇಕಾಗಿರುವ ರೀತಿಯಲ್ಲಿ ಅದು ಇರುವ ಜಾಗದಲ್ಲೇ ಅಥವಾ ತೆರೆದ ಚರಂಡಿಗೆ ಅಥವಾ ಗುಂಡಿಗೆಹಾಕುವುದಕ್ಕೆ ಅಥವಾ ನೀರಿನಿಂದ ತಳ್ಳುವುದಕ್ಕಾಗಿರುವ ಶೌಚಾಲಯ:

ಪರಂತು, ಪ್ರಯಾಣಿಕರ ರೈಲು ಗಾಡಿಯಲ್ಲಿ ನೀರು ಹರಿಸಿ ಸ್ವಚ್ಛಗೊಳಿಸುವ ಶೌಚಾಲಯಗಳು ಇದ್ದರೆ, ಈ ಬಗ್ಗೆ ಕೇಂದ್ರ ಸರ್ಕಾರವು ಅಧಿಸೂಚಿಸಬಹುದಾದಂಥ ಸುರಕ್ಷಾ ಸಾಧನ ಸಲಕರಣೆಗಳ ಸಹಾಯದೊಂದಿಗೆ ನೌಕರನು ಅವುಗಳನ್ನು ಸ್ವಚ್ಛಗೊಳಿಸಿದಾಗ ಅವುಗಳನ್ನು ಶುಚಿಯಾಗಿಲ್ಲದ ಶೌಚಾಲಯಗಳೆಂದು ಭಾವಿಸತಕ್ಕದ್ದಲ್ಲ.

(ಎಫ್) "ಸ್ಥಳೀಯ ಪ್ರಾಧಿಕಾರ" ಎಂದರೆ,-

(i) ಸಂವಿಧಾನದ 243-ಪಿ ಅನುಚ್ಛೇದದ (ಇ) ಖಂಡದಲ್ಲಿ ಮತ್ತು (ಎಫ್) ಖಂಡದಲ್ಲಿ ಪರಿಭಾಷಿಸಿರುವಂತೆ ಯಾವ ಪುರಸಭೆಯು ಅಥವಾ ಪಂಚಾಯತಿಯು ತನ್ನ ಅಧಿಕಾರವ್ಯಾಪ್ತಿಯ ಪ್ರದೇಶದಲ್ಲಿ ನೈರ್ಮಲ್ಯಕ್ಕಾಗಿ ಜವಾಬ್ದಾರಿ ಹೊಂದಿರುವುದೋ ಆ ಪುರಸಭೆ ಅಥವಾ ಪಂಚಾಯತಿ;

(ii) ದಂಡು ಪ್ರದೇಶಗಳ ಅಧಿನಿಯಮ, 2006ರ 10ನೇ ಪ್ರಕರಣದ ಮೇರೆಗೆ ರಚಿತವಾದ ದಂಡು ಪ್ರದೇಶದ ಮಂಡಳಿ; ಮತ್ತು

(iii) ರೈಲ್ವೆ ಪ್ರಾಧಿಕಾರ;

(ಜಿ) "ಮಲಹೊರುವ ಜಾಡಮಾಲಿ" ಎಂದರೆ ಈ ಅಧಿನಿಯಮವು ಪ್ರಾರಂಭವಾದಾಗ ಅಥವಾ ನಂತರದ ಯಾವುದೇ ಕಾಲದಲ್ಲಿ, ಶುಚಿಯಾಗಿಲ್ಲದ ಶೌಚಾಲಯದಲ್ಲಿನ ಮಲಮೂತ್ರವನ್ನು ಅಥವಾ ಶುಚಿಯಾಗಿಲ್ಲದ ಶೌಚಾಲಯದಿಂದ ಮಾನವನ ಮಲಮೂತ್ರವನ್ನು ತೆರೆದ ಚರಂಡಿಗೆ ಅಥವಾ ಯಾವುದೇ ಒಂದು ಗುಂಡಿಗೆ ವಿಲೇ ಮಾಡಲಾಗಿತ್ತೋ ಅದನ್ನು ಅಥವಾ ರೈಲ್ವೆ ಹಳಿಗಳ ಮೇಲಿರುವ ಅಥವಾ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂಥ ಇತರ ಅಂಥ ಸ್ಥಳಗಳಲ್ಲಿರುವ ಅಥವಾ ಆವರಣಗಳಲ್ಲಿರುವ ಅದನ್ನು, ಅದು ಸಂಪೂರ್ಣವಾಗಿ ಕೊಳೆಯುವುದಕ್ಕೆ ಮುಂಚೆಯೇ ದೈಹಿಕವಾಗಿ ಸ್ವಚ್ಛಗೊಳಿಸಲು, ಸಾಗಿಸಲು, ವಿಲೇ ಮಾಡಲು ಅಥವಾ ಅನ್ಯಥಾ ಯಾವುದೇ ರೀತಿಯಲ್ಲಿ ಕೈಯಿಂದ ಸಾಗಿಸಲು ವ್ಯಕ್ತಿಯು ಅಥವಾ ಸ್ಥಳೀಯ ಪ್ರಾಧಿಕಾರವು ಅಥವಾ ಏಜೆನ್ಸಿಯು ಅಥವಾ ಗುತ್ತಿಗೆದಾರನು ತೊಡಗಿಸಿಕೊಂಡಿರುವ ಅಥವಾ ನಿಯೋಜಿಸಿಕೊಂಡಿರುವ ವ್ಯಕ್ತಿ ಮತ್ತು "ಮಲಹೊರುವ ಜಾಡಮಾಲಿ ಕೆಲಸ" ಎಂಬ ಪದಾವಳಿಯನ್ನು ತದನುಸಾರವಾಗಿ ಅರ್ಥೈಸತಕ್ಕದ್ದು.

ವಿವರಣೆ.- ಈ ಖಂಡದ ಉದ್ದೇಶಕ್ಕಾಗಿ,-

(ಎ) "ತೊಡಗಿಸಿಕೊಂಡಿರುವ ಅಥವಾ ನಿಯೋಜಿಸಿಕೊಂಡಿರುವ" ಎಂದರೆ, ನಿಯತವಾಗಿ ಅಥವಾ ಗುತ್ತಿಗೆ ಆಧಾರದ ಮೇಲೆ ತೊಡಗಿಸಿಕೊಂಡಿರುವುದು ಅಥವಾ ನಿಯೋಜಿಸಿಕೊಂಡಿರುವುದು;

(ಬಿ) ಕೇಂದ್ರ ಸರ್ಕಾರವು ಈ ಬಗ್ಗೆ ಅಧಿಸೂಚಿಸಬಹುದಾದಂಥ ಸಾಧನ ಸಲಕರಣೆಗಳ ಸಹಾಯದೊಂದಿಗೆ ಮತ್ತು ಅಂಥ ಸಂರಕ್ಷಣಾ ಪರಿಕರಗಳನ್ನು ಬಳಸುವ ಮೂಲಕ ಮಲಮೂತ್ರವನ್ನು ಸ್ವಚ್ಛಗೊಳಿಸುವುದಕ್ಕೆ ತೊಡಗಿರುವ ಅಥವಾ ನಿಯೋಜಿತನಾಗಿರುವ ವ್ಯಕ್ತಿಯನ್ನು "ಮಲಹೊರುವ ಜಾಡಮಾಲಿ" ಎಂದು ಭಾವಿಸತಕ್ಕದ್ದಲ್ಲ;

(ಹೆಚ್) "ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗ" ಎಂದರೆ ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗ ಅಧಿನಿಯಮ, 1993ರ (1993ರ 64) 3ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಮತ್ತು ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯದ ಸಂಖ್ಯೆ: 17015/18/2003-ಎಸ್‌ಸಿಡಿ-VI, ದಿನಾಂಕ 24ನೇ ಫೆಬ್ರವರಿ 2004ರಲ್ಲಿ ನಿರ್ಣಯಿಸಿದ ನಿರ್ಣಯದಂತೆ ಮತ್ತು ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಮುಂದುವರಿಯುತ್ತಿರುವ ರಾಷ್ಟ್ರೀಯ ಸಫಾಯೀ ಕರ್ಮಚಾರಿಗಳ ಆಯೋಗ.

(ಐ) "ಅಧಿಸೂಚನೆ" ಎಂದರೆ, ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ ಮತ್ತು "ಅಧಿಸೂಚಿಸಬಹುದಾದ" ಎಂಬ ಪದಾವಳಿಯನ್ನು ತದನುಸಾರವಾಗಿ ಅರ್ಥೈಸತಕ್ಕದ್ದು.

(ಜೆ) ಶುಚಿಯಾಗಿಲ್ಲದ ಶೌಚಾಲಯಗಳಿರುವ ಅಥವಾ ಯಾರನ್ನೋ ಮಲಹೊರುವ ಜಾಡಮಾಲಿಯಾಗಿ ನಿಯೋಜನೆ ಮಾಡಿಕೊಂಡಿರುವ ಆವರಣಗಳಿಗೆ ಸಂಬಂಧಿಸಿದಂತೆ "ಅಧಿಭೋಗದಾರ" ಎಂದರೆ ತತ್ಕಾಲದಲ್ಲಿ ಅಂಥ ಆವರಣಗಳ ಸ್ವಾಧೀನ ಹೊಂದಿರುವ ವ್ಯಕ್ತಿ;

(ಕೆ) ಶುಚಿಯಾಗಿಲ್ಲದ ಶೌಚಾಲಯಗಳಿರುವ ಯಾರನ್ನೋ ಮಲಹೊರುವ ಜಾಡಮಾಲಿಯಾಗಿ ನಿಯೋಜನೆ ಮಾಡಿಕೊಂಡಿರುವ ಆವರಣಗಳಿಗೆ ಸಂಬಂಧಿಸಿದಂತೆ "ಮಾಲೀಕ" ಎಂದರೆ ತತ್ಕಾಲದಲ್ಲಿ ಅಂಥ ಆವರಣಗಳ ಮೇಲೆ ಕಾನೂನು ಸ್ವಾಮ್ಯ ಹೊಂದಿರುವ ವ್ಯಕ್ತಿ;

(ಎಲ್) "ನಿಯಮಿಸಿದ" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಂ) "ರೈಲ್ವೆ ಪ್ರಾಧಿಕಾರ" ಎಂದರೆ, ರೈಲ್ವೆ ಭೂಮಿಯ ಆಡಳಿತವನ್ನು ನಿರ್ವಹಿಸುವ ಬಗ್ಗೆ ಕೇಂದ್ರ ಸರ್ಕಾರವು ಅಧಿಸೂಚಿಸಬಹುದಾದ ಪ್ರಾಧಿಕಾರ;

(ಎನ್) "ರೈಲ್ವೆ ಭೂಮಿ" ಎಂಬುದು, ರೈಲ್ವೆಗಳ ಅಧಿನಿಯಮ, 1989 (1989ರ 24)ರ2ನೇ ಪ್ರಕರಣದ (32-ಎ) ಖಂಡದಲ್ಲಿ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕದ್ದು;

(ಓ) "ಶುಚಿಗೊಳಿಸಿದ ಶೌಚಾಲಯ" ಎಂದರೆ, ಯಾವ ಶೌಚಾಲಯವು ಶುಚಿಗೊಳಿಸಿಲ್ಲದ ಶೌಚಾಲಯ ಅಲ್ಲವೊ ಆ ಶೌಚಾಲಯ;

(ಪಿ) "ರೊಚ್ಚು ತೊಟ್ಟಿ" ಎಂದರೆ, ಮಾನವನ ಮಲಮೂತ್ರವು ಸಾಗಿ ಬಂದು ಬೀಳುವುದಕ್ಕೆ ಮತ್ತು ಬ್ಯಾಕ್ಟೀರಿಯಾ ಕ್ರಿಯೆಯಿಂದ ಮಲಮೂತ್ರವು ಕೊಳೆಯುವುದಕ್ಕೆ ಅನುವು ಮಾಡಿಕೊಡುವ ಸಲುವಾಗಿ ಬಳಸುವ ಸಾಮಾನ್ಯವಾಗಿ ನೆಲದಡಿಯಲ್ಲಿ ನಿರ್ಮಿಸಿರುವ ಜಲನಿರೋಧಕ ತೊಟ್ಟಿ ಅಥವಾ ಛೇಂಬರ್;

(ಕ್ಯೂ) "ಒಳಚರಂಡಿ" ಎಂದರೆ, ಇತರ ತ್ಯಾಜ್ಯ ವಸ್ತುಗಳು ಮತ್ತು ಚರಂಡಿಯ ತ್ಯಾಜ್ಯಗಳಜೊತೆಗೆ ಮಾನವನ ಮಲಮೂತ್ರವನ್ನು ಸಾಗಿಸುವುದಕ್ಕಾಗಿ ನೆಲದಡಿಯಲ್ಲಿ ಹಾಕಲಾದ ಕೊಳವೆ ಮಾರ್ಗವ್ಯವಸ್ಥೆ ಅಥವಾ ಕೊಳವೆ ಮಾರ್ಗ;

(ಆರ್) ಕೇಂದ್ರಾಡಳಿತ ಪ್ರದೇಶಕ್ಕೆ ಸಂಬಂಧಿಸಿದಂತೆ "ರಾಜ್ಯ ಸರ್ಕಾರ" ಎಂದರೆ ಸಂವಿಧಾನದ 239ನೇ ಅನುಚ್ಛೇದದ ಮೇರೆಗೆ ನೇಮಕಗೊಂಡ ಅದರ ಆಡಳಿತಗಾರ;

(ಎಸ್) "ಸಮೀಕ್ಷೆ" ಎಂದರೆ, ಅಧಿನಿಯಮದ 11ನೇ ಅಥವಾ 14ನೇ ಪ್ರಕರಣಕ್ಕೆ ಅನುಸಾರವಾಗಿ ಕೈಗೊಂಡ ಮಲಹೊರುವ ಜಾಡಮಾಲಿಗಳ ಸಮೀಕ್ಷೆ.

(2) ಈ ಅಧಿನಿಯಮದಲ್ಲಿ ಬಳಸಿದ ಹಾಗೂ ಪರಿಭಾಷಿಸಿಲ್ಲದ ಪದಗಳಿಗೆ ಮತ್ತು ಪದಾವಳಿಗೆ, ದಂಡುಪ್ರದೇಶಗಳ ಅಧಿನಿಯಮ, 2006 (2006ರ 41) ರಲ್ಲಿ ಇವೇ ಪದಗಳನ್ನು ಮತ್ತು ಪದಾವಳಿಯನ್ನು ಪರಿಭಾಷಿಸಿದ್ದರೆ ಆ ಅಧಿನಿಯಮದಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳೇ ಇರತಕ್ಕದ್ದು.

(3) ಈ ಅಧಿನಿಯಮದ IV ರಿಂದ VIIIರವರೆಗಿನ ಅಧ್ಯಾಯಗಳಲ್ಲಿ ಪುರಸಭೆಗೆ ಮಾಡಿರುವ ಉಲ್ಲೇಖವು ಅನುಕ್ರಮವಾಗಿ ದಂಡುಪ್ರದೇಶ ಮಂಡಲಿಯ ಮತ್ತು ರೈಲ್ವೆ ಭೂಮಿಯ ಅಧಿಕಾರ ವ್ಯಾಪ್ತಿಯೊಳಗೆ ಸೇರಿದ ಪ್ರದೇಶಗಳಿಗೆ ಮತ್ತು ರೈಲ್ವೆ ಭೂಮಿಗೆ ಸಂಬಂಧಪಟ್ಟಂತೆ ಸಂದರ್ಭಾನುಸಾರ ದಂಡುಪ್ರದೇಶ ಮಂಡಲಿಗೆ ಅಥವಾ ರೈಲ್ವೆ ಪ್ರಾಧಿಕಾರಕ್ಕೆ ಮಾಡಿದ ಉಲ್ಲೇಖವನ್ನು ಒಳಗೊಳ್ಳತಕ್ಕದ್ದು.

3. **ಅಧಿನಿಯಮವು ಅಧ್ಯಾರೋಹಿ ಪರಿಣಾಮವನ್ನು ಹೊಂದಿರುವುದು.**- ಮಲಹೊರುವ ಜಾಡಮಾಲಿಗಳ ನಿಯೋಜನೆ ಮತ್ತು ಶುಷ್ಕ ಶೌಚಾಲಯಗಳ ನಿರ್ಮಾಣ (ನಿಷೇಧ) ಅಧಿನಿಯಮ, 1993 (1993ರ 46)ರಲ್ಲಿ ಅಥವಾ ಇತರ ಯಾವುದೇ ಕಾನೂನಿನಲ್ಲಿ ಅಥವಾ ಇತರ ಯಾವುದೇ ಕಾನೂನಿನ ಬಲದಿಂದ ಪರಿಣಾಮಕಾರಿಯಾಗಿರುವ ಯಾವುದೇ ಲಿಖಿತದಲ್ಲಿ ಅಸಂಗತವಾದುದು ಏನೇ ಒಳಗೊಂಡಿದ್ದರೂ ಈ ಅಧಿನಿಯಮದ ಉಪಬಂಧಗಳು ಪರಿಣಾಮಕಾರಿಯಾಗಿರತಕ್ಕದ್ದು.

## ಅಧ್ಯಾಯ-II

## ಶುಚಿಯಾಗಿಲ್ಲದ ಶೌಚಾಲಯಗಳನ್ನು ಗುರುತಿಸುವುದು

**4.ಸ್ಥಳೀಯ ಪ್ರಾಧಿಕಾರಗಳು ಶುಚಿಯಾಗಿಲ್ಲದ ಶೌಚಾಲಯಗಳನ್ನು ಗುರುತಿಸುವುದಕ್ಕೆ ಮತ್ತು ಸಮುದಾಯ ಶುಚಿಯಾಗಿರುವ ಶೌಚಾಲಯಗಳನ್ನು ಒದಗಿಸುವುದಕ್ಕೆ ಸಮೀಕ್ಷೆ ಮಾಡುವುದು.**-(1) ಪ್ರತಿಯೊಂದು ಸ್ಥಳೀಯ ಪ್ರಾಧಿಕಾರವು ,-

(ಎ) ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ತಿಂಗಳ ಅವಧಿಯೊಳಗೆ ನಿಯಮಿಸಬಹುದಾದಂಥ ರೀತಿಯಲ್ಲಿ, ಅದು ತನ್ನ ಅಧಿಕಾರವ್ಯಾಪ್ತಿಯೊಳಗೆ ಅಸ್ತಿತ್ವದಲ್ಲಿರುವ ಶುಚಿಯಾಗಿಲ್ಲದ ಶೌಚಾಲಯಗಳ ಸಮೀಕ್ಷೆಯನ್ನು ನಡೆಸತಕ್ಕದ್ದು ಮತ್ತು ಅಂಥ ಶುಚಿಯಾಗಿಲ್ಲದ ಶೌಚಾಲಯಗಳ ಪಟ್ಟಿಯನ್ನು ಪ್ರಕಟಿಸತಕ್ಕದ್ದು;

(ಬಿ) ಈ ಪ್ರಕರಣದ (ಎ) ಖಂಡದ ಮೇರೆಗೆ ಪಟ್ಟಿಯು ಪ್ರಕಟವಾದ ದಿನಾಂಕದಿಂದ ಹದಿನೈದು ದಿನಗಳೊಳಗೆ, ಅವುಗಳ ಅಧಿಭೋಗದಾರನಿಗೆ ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಆರುತಿಂಗಳ ಅವಧಿಯೊಳಗೆ ಶುಚಿಯಾಗಿಲ್ಲದ ಶೌಚಾಲಯಗಳನ್ನು ನೆಲಸಮ ಮಾಡುವುದಕ್ಕೆ ಅಥವಾ ಅವುಗಳನ್ನು ಶುಚಿಯಾದ ಶೌಚಾಲಯಗಳನ್ನಾಗಿ ಪರಿವರ್ತಿಸುವುದಕ್ಕೆ ನೋಟೀಸ್ ನೀಡತಕ್ಕದ್ದು:

ಪರಂತು, ಸ್ಥಳೀಯ ಪ್ರಾಧಿಕಾರವು, ಸಾಕಷ್ಟು ಸೂಕ್ತ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ಸದರಿ ಅವಧಿಯನ್ನು ಮೂರು ತಿಂಗಳುಗಳು ಮೀರದಂತೆ ವಿಸ್ತರಿಸಬಹುದು;

(ಸಿ) ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಒಂಭತ್ತು ತಿಂಗಳುಗಳು ಮೀರದ ಅವಧಿಯೊಳಗೆ, ಯಾವ ಪ್ರದೇಶಗಳಲ್ಲಿ ಶುಚಿಯಾಗಿಲ್ಲದ ಶೌಚಾಲಯಗಳು ಕಂಡುಬಂದಿವೆಯೋ ಆ ಪ್ರದೇಶಗಳಲ್ಲಿ ಅವಶ್ಯಕವೆಂದು ತಾನು ಪರಿಗಣಿಸಬಹುದಾದಷ್ಟು ಸಂಖ್ಯೆಯ ಶುಚಿಯಾದ ಸಮುದಾಯ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಒಳಗೊಂಡಿರುವ ಉಪಬಂಧಗಳಿಗೆ ಬಾಧಕವಾಗದಂತೆ, ಪುರಸಭೆಗಳು, ದಂಡುಪ್ರದೇಶ ಮಂಡಲಿಗಳು ಮತ್ತು ರೈಲ್ವೆ ಪ್ರಾಧಿಕಾರಗಳು ಸಹ, ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬಯಲು ಮಲವಿಸರ್ಜನೆ ರೂಢಿಯನ್ನು ಸಂಪೂರ್ಣವಾಗಿ ಹೋಗಲಾಡಿಸುವ ನಿಟ್ಟಿನಲ್ಲಿ ಸಮುಚಿತ ಸರ್ಕಾರವು ಅಧಿಸೂಚನೆ ಮೂಲಕ, ನಿರ್ದಿಷ್ಟಪಡಿಸಬಹುದಾದಂತೆ ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಮೂರು ವರ್ಷಗಳಿಗೆ ಮೀರದಂಥ ಅವಧಿಯೊಳಗೆ ಸಾಕಷ್ಟು ಸಂಖ್ಯೆಯ ಶುಚಿಯಾದ ಸಮುದಾಯ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.

(3) ಉಪಪ್ರಕರಣ(1)ರಲ್ಲಿ ಮತ್ತು (2)ರಲ್ಲಿ ನಿರ್ದಿಷ್ಟಪಡಿಸಿದಂತೆ ಸಮುದಾಯ ಶುಚಿಯಾದ ಶೌಚಾಲಯಗಳ ನಿರ್ಮಾಣ ಮಾಡುವುದು ಮತ್ತು ಎಲ್ಲಾ ಕಾಲದಲ್ಲೂ ಅವುಗಳನ್ನು ಆರೋಗ್ಯಕರ ಸ್ಥಿತಿಯಲ್ಲಿಟ್ಟುಕೊಳ್ಳಲು ಸ್ವಚ್ಛತೆಯನ್ನು ಕಾಪಾಡಿಕೊಳ್ಳುವ ವ್ಯವಸ್ಥೆ ಮಾಡುವುದು ಸ್ಥಳೀಯ ಪ್ರಾಧಿಕಾರಗಳು ಜವಾಬ್ದಾರರಾಗಿರತಕ್ಕದ್ದು.

**ವಿವರಣೆ.**– ಈ ಪ್ರಕರಣದ ಉದ್ದೇಶಗಳಿಗಾಗಿ, ರೈಲ್ವೆ ಪ್ರಾಧಿಕಾರಗಳಿಗೆ ಸಂಬಂಧಿಸಿದಂತೆ "ಸಮುದಾಯ" ಎಂದರೆ, ರೈಲ್ವೆಯ ಪ್ರಯಾಣಿಕರು, ಅದರ ಸಿಬ್ಬಂದಿ ಮತ್ತು ಇತರ ಅಧಿಕೃತ ಬಳಕೆದಾರರು.

## ಅಧ್ಯಾಯ–III

## ಶುಚಿಯಾಗಿಲ್ಲದ ಶೌಚಾಲಯಗಳ ಮತ್ತು ಮಲಹೊರುವ ಜಾಡಮಾಲಿಯಾಗಿ ನಿಯೋಜನೆ ಹಾಗೂ ತೊಡಗಿಸುವುದರ ಮೇಲೆ ನಿಷೇಧ.

**5. ಶುಚಿಯಾಗಿಲ್ಲದ ಶೌಚಾಲಯಗಳ ಮತ್ತು ಮಲಹೊರುವ ಜಾಡಮಾಲಿಯಾಗಿ ನಿಯೋಜನೆ ಹಾಗೂ ತೊಡಗಿಸುವುದರ ನಿಷೇಧ.**– (1) ಮಲಹೊರುವ ಜಾಡಮಾಲಿಗಳ ನಿಯೋಜನೆ ಮತ್ತು ಶುಷ್ಕ ಶೌಚಾಲಯಗಳ ನಿರ್ಮಾಣ (ನಿಷೇಧ) ಅಧಿನಿಯಮ, 1993 (1993ರ 46)ರಲ್ಲಿ ಅಸಂಗತವಾದುದು ಏನೇ ಇದ್ದರೂ,ಈ ಅಧಿನಿಯಮವು ಪ್ರಾರಂಭವಾದ ದಿನಾಂಕದ ತರುವಾಯ ಯಾರೇ ವ್ಯಕ್ತಿಯು, ಯಾವುದೇ ಸ್ಥಳೀಯ ಪ್ರಾಧಿಕಾರವು ಅಥವಾ ಯಾವುದೇ ಏಜೆನ್ಸಿಯು,–

(ಎ) ಶುಚಿಯಾಗಿಲ್ಲದ ಶೌಚಾಲಯವನ್ನು ನಿರ್ಮಿಸತಕ್ಕದ್ದಲ್ಲ; ಅಥವಾ

(ಬಿ) ಮಲಹೊರುವ ಜಾಡಮಾಲಿಯನ್ನು ಪ್ರತ್ಯಕ್ಷವಾಗಿಯಾಗಲೀ ಅಥವಾ ಪರೋಕ್ಷವಾಗಿಯಾಗಲೀ ಮಲಹೊರುವುದಕ್ಕೆ ತೊಡಗಿಸತಕ್ಕದ್ದಲ್ಲ ಅಥವಾ ನಿಯೋಜಿಸತಕ್ಕದ್ದಲ್ಲ ಮತ್ತು ಹಾಗೆ ಮಲಹೊರುವ ವೃತ್ತಿಯಲ್ಲಿ ತೊಡಗಿರುವ ಅಥವಾ ನಿಯೋಜಿತನಾಗಿರುವ ಪ್ರತಿಯೊಬ್ಬ ವ್ಯಕ್ತಿಯನ್ನು ದೈಹಿಕವಾಗಿ ಮಲಹೊರುವ ಯಾವುದೇ ಸ್ಪಷ್ಟ ಅಥವಾ ಇಂಗಿತ ಬಾಧ್ಯತೆಯಿಂದ ಕೂಡಲೇ ವಿಮೋಚನೆಗೊಳಿಸತಕ್ಕದ್ದು.

(2) ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಂದು ಅಸ್ತಿತ್ವದಲ್ಲಿರುವ ಪ್ರತಿಯೊಂದು ಶುಚಿಯಾಗಿಲ್ಲದ ಶೌಚಾಲಯವನ್ನು 4ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ ಹಾಗೆ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾಗುವುದಕ್ಕೂ ಮುಂಚೆ ಅಧಿಭೋಗದಾರನು ತನ್ನ ಸ್ವಂತ ಖರ್ಚಿನಲ್ಲಿ ನೆಲಸಮಗೊಳಿಸತಕ್ಕದ್ದು ಅಥವಾ ಅದನ್ನು ಶುಚಿಯಾದ ಶೌಚಾಲಯವನ್ನಾಗಿ ಮಾರ್ಪಾಡು ಮಾಡತಕ್ಕದ್ದು :

ಪರಂತು, ಶುಚಿಯಾಗಿಲ್ಲದ ಶೌಚಾಲಯಕ್ಕೆ ಸಂಬಂಧಿಸಿದಂತೆ ಹಲವಾರು ಅಧಿಭೋಗದಾರರಿದ್ದಲ್ಲಿ ಅದನ್ನು ನೆಲಸಮಗೊಳಿಸುವುದಕ್ಕೆ ಅಥವಾ ಮಾರ್ಪಾಡು ಮಾಡುವುದಕ್ಕೆ,–

(ಎ) ಅಧಿಭೋಗದಾರರ ಪೈಕಿ ಮಾಲೀಕನೂ ಅಧಿಭೋಗದಾರನಾಗಿರುವುದು ಕಂಡುಬಂದ ಸಂದರ್ಭದಲ್ಲಿ ಆವರಣಗಳ ಮಾಲೀಕನು; ಮತ್ತು

(ಬಿ) ಇತರ ಎಲ್ಲಾ ಸಂದರ್ಭಗಳಲ್ಲಿ ಎಲ್ಲಾ ಅಧಿಭೋಗದಾರರು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ

– ಹೊಣೆಗಾರರಾಗಿರತಕ್ಕದ್ದು :

ಪರಂತು, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಪ್ರವರ್ಗಗಳಿಗೆ ಮತ್ತು ಅಂಥ ಶ್ರೇಣಿಗಳಿಗೆ ಸೇರಿದ ಅಧಿಭೋಗದಾರರಿಗೆ ಶುಚಿಯಾಗಿಲ್ಲದ ಶೌಚಾಲಯಗಳನ್ನು ಶುಚಿಯಾದ ಶೌಚಾಲಯಗಳನ್ನಾಗಿ ಮಾರ್ಪಾಡು ಮಾಡುವುದಕ್ಕೆ ನೆರವನ್ನು ನೀಡಬಹುದು:

ಮತ್ತೂ ಪರಂತು, ರಾಜ್ಯದ ನೆರವು ಬರದಿರುವುದು ಒಂಭತ್ತು ತಿಂಗಳ ಸದರಿ ಅವಧಿ ಮೀರಿದ ಮೇಲೆಯೂ, ಶುಚಿಯಾಗಿಲ್ಲದ ಶೌಚಾಲಯವನ್ನು ನಿರ್ವಹಿಸಲು ಅಥವಾ ಬಳಕೆ ಮಾಡುವುದಕ್ಕೆ ಬಲವಾದ ಕಾರಣವಾಗತಕ್ಕದ್ದಲ್ಲ.

(3) ಯಾರೇ ಅಧಿಭೋಗದಾರನು (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಶುಚಿಯಾಗಿಲ್ಲದ ಶೌಚಾಲಯವನ್ನು ನೆಲಸಮಗೊಳಿಸುವುದಕ್ಕೆ ಅಥವಾ ಅದನ್ನು ಶುಚಿಯಾದ ಶೌಚಾಲಯವನ್ನಾಗಿ ಮಾರ್ಪಾಟುಗೊಳಿಸುವುದಕ್ಕೆ ವಿಫಲನಾಗಿದ್ದರೆ, ಅಂಥ ಶುಚಿಯಾಗಿಲ್ಲದ ಶೌಚಾಲಯ ಇರುವ ಪ್ರದೇಶದ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಸ್ಥಳೀಯ ಪ್ರಾಧಿಕಾರವು, ಅದರ ಅಧಿಭೋಗದಾರನಿಗೆ ಇಪ್ಪತ್ತೊಂದು ದಿನಗಳು ಮೀರದ ಅವಧಿಯ ಒಂದು ನೋಟೀಸನ್ನು ನೀಡಿದ ತರುವಾಯ, ಅಂಥ ಶುಚಿಯಾಗಿಲ್ಲದ ಶೌಚಾಲಯವನ್ನು ಶುಚಿಯಾದ ಶೌಚಾಲಯವನ್ನಾಗಿ ಮಾರ್ಪಡಿಸತಕ್ಕದ್ದು ಅಥವಾ ಅದನ್ನು

ನೆಲಸಮಗೊಳಿಸತಕ್ಕದ್ದು ಮತ್ತು ಅದು ಹಾಗೆ ಮಾರ್ಪಾಡುಗೊಳಿಸಿದ್ದಕ್ಕೆ ಅಥವಾ ಸಂದರ್ಭಾನುಸಾರ ನೆಲಸಮಗೊಳಿಸಿದ್ದಕ್ಕೆ ವೆಚ್ಚವನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಅಂಥ ಅಧಿಭೋಗದಾರನಿಂದ ವಸೂಲಿ ಮಾಡಲು ಹಕ್ಕನ್ನು ಹೊಂದಿರತಕ್ಕದ್ದು.

6. **ಕರಾರು, ಒಪ್ಪಂದ, ಮುಂತಾದವುಗಳು ಅನೂರ್ಜಿತವಾಗುವುದು.–** (1) ಈ ಅಧಿನಿಯಮವು ಪ್ರಾರಂಭವಾಗುವುದಕ್ಕೂ ಮುಂಚೆ ವ್ಯಕ್ತಿಯನ್ನು ಮಲಹೊರುವ ಜಾಡಮಾಲಿಯ ಕೆಲಸ ಮಾಡುವ ಉದ್ದೇಶಕ್ಕಾಗಿ ತೊಡಗಿಸಲು ಅಥವಾ ನಿಯೋಜಿಸಲು ಯಾವುದೇ ಕರಾರು, ಒಪ್ಪಂದ ಅಥವಾ ಇತರ ಲಿಖಿತ ಪತ್ರಗಳನ್ನು ಮಾಡಿಕೊಂಡಿದ್ದರೆ ಅಥವಾ ಬರೆದು ಕೊಟ್ಟಿದ್ದರೆ, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಂದು ಅಂಥ ಕರಾರು, ಒಪ್ಪಂದ ಅಥವಾ ಇತರ ಲಿಖಿತ ಪತ್ರಗಳು ಕೊನೆಗೊಳ್ಳತಕ್ಕದ್ದು ಮತ್ತು ಅವು ಅನೂರ್ಜಿತವಾಗತಕ್ಕದ್ದು ಮತ್ತು ಪ್ರವರ್ತನೆಯಲ್ಲಿರತಕ್ಕದ್ದಲ್ಲ ಮತ್ತು ಅದಕ್ಕಾಗಿ ನಷ್ಟಪರಿಹಾರವನ್ನು ಸಂದಾಯ ಮಾಡತಕ್ಕದ್ದಲ್ಲ.

(2) ಉಪಪ್ರಕರಣ(1)ರಲ್ಲಿ ಏನೇ ಒಳಗೊಂಡಿದ್ದರೂ, ಯಾರೇ ವ್ಯಕ್ತಿಯನ್ನು ಪೂರ್ಣಕಾಲಿಕ ಆಧಾರದ ಮೇಲೆ ಮಲಹೊರುವ ಜಾಡಮಾಲಿಯಾಗಿ ನಿಯೋಜಿಸತಕ್ಕದ್ದಲ್ಲ ಅಥವಾ ತೊಡಗಿಸತಕ್ಕದ್ದಲ್ಲ ಹಾಗೂ ಅವನ ಉದ್ಯೋಗದಾತನು ಅಂಥ ವ್ಯಕ್ತಿಯನ್ನು ಅಂಥ ಕೆಲಸದಿಂದ ತೆಗೆದುಹಾಕತಕ್ಕದ್ದು. ಆದರೆ, ಆ ವ್ಯಕ್ತಿಯು ಇಚ್ಛಿಸಿದರೆ ಕನಿಷ್ಠಪಕ್ಷ ಅದೇ ಉಪಲಬ್ಧಿಗಳ ಮೇಲೆ ಅವನನ್ನು ಕೆಲಸದಲ್ಲಿ ಇಟ್ಟುಕೊಳ್ಳತಕ್ಕದ್ದು ಮತ್ತು ಅವನಿಗೆ ಮಲಹೊರುವ ಜಾಡಮಾಲಿಯ ಹೊರತಾದ ಕೆಲಸವನ್ನು ವಹಿಸತಕ್ಕದ್ದು.

**7.ಒಳಚರಂಡಿ ಮತ್ತು ರೊಚ್ಚುತೊಟ್ಟಿಗಳನ್ನು ಸ್ವಚ್ಛಗೊಳಿಸುವಂತಹ ಅಪಾಯಕಾರಿ ಕೆಲಸಕ್ಕೆ ವ್ಯಕ್ತಿಗಳನ್ನು ತೊಡಗಿಸಿಕೊಳ್ಳುವುದನ್ನು ಅಥವಾ ನಿಯೋಜನೆ ಮಾಡುವುದನ್ನು ನಿಷೇಧಿಸುವುದು.**–ಯಾರೇ ವ್ಯಕ್ತಿಯು, ಸ್ಥಳೀಯ ಪ್ರಾಧಿಕಾರವು, ಅಥವಾ ಯಾವುದೇ ಏಜೆನ್ಸಿಯು, ಈ ಅಧಿನಿಯಮ ಪ್ರಾರಂಭವಾದ ದಿನಾಂಕದಿಂದ ಒಂದು ವರ್ಷದ ಅವಧಿ ಮೀರದಂಥ ಯಾವುದೇ ದಿನಾಂಕದಂದು ರಾಜ್ಯ ಸರ್ಕಾರವು, ಅಧಿಸೂಚಿಸಬಹುದಾದಂಥ ದಿನಾಂಕದಿಂದ ಯಾರೇ ವ್ಯಕ್ತಿಯನ್ನು ಒಳಚರಂಡಿ ಮತ್ತು ರೊಚ್ಚುತೊಟ್ಟಿಗಳನ್ನು ಸ್ವಚ್ಛಗೊಳಿಸುವಂತಹ ಅಪಾಯಕಾರಿ ಕೆಲಸಕ್ಕೆ ಪ್ರತ್ಯಕ್ಷವಾಗಿಯಾಗಲೀ ಅಥವಾ ಪರೋಕ್ಷವಾಗಿಯಾಗಲೀ ತೊಡಗಿಸತಕ್ಕದ್ದಲ್ಲ ಅಥವಾ ನಿಯೋಜಿಸತಕ್ಕದ್ದಲ್ಲ.

8. **5ನೇ ಪ್ರಕರಣದ ಅಥವಾ 6ನೇ ಪ್ರಕರಣದ ಉಲ್ಲಂಘನೆಗಾಗಿ ದಂಡನೆ.–** 5ನೇ ಪ್ರಕರಣದ ಅಥವಾ 6ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಮೊದಲ ಸಲ ಉಲ್ಲಂಘಿಸಿದ್ದಕ್ಕಾಗಿ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ಮತ್ತು ತರುವಾಯದ ಯಾವುದೇ ಉಲ್ಲಂಘನೆಗಾಗಿ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

9. **7ನೇ ಪ್ರಕರಣದ ಉಲ್ಲಂಘನೆಗಾಗಿ ದಂಡನೆ.–** 7ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಮೊದಲ ಸಲ ಉಲ್ಲಂಘಿಸಿದ್ದಕ್ಕಾಗಿ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ಮತ್ತು ತರುವಾಯದ ಯಾವುದೇ ಉಲ್ಲಂಘನೆಗಾಗಿ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

10. **ಪ್ರಾಸಿಕ್ಯೂಷನ್‌ಗೆ ಕಾಲಪರಿಮಿತಿ.–** ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಮಾಡಲಾಗಿದೆಯೆಂದು ಆರೋಪಿಸಿರುವ ಅಪರಾಧವು ಸಂಭವಿಸಿದ ದಿನಾಂಕದಿಂದ ಮೂರು ತಿಂಗಳೊಳಗೆ ಯಾರೇ ವ್ಯಕ್ತಿಯು ಆ ಬಗ್ಗೆ ದೂರನ್ನು ಸಲ್ಲಿಸಿದ್ದ ಹೊರತು, ಆ ಅಪರಾಧವನ್ನು ಯಾವುದೇ ನ್ಯಾಯಾಲಯವು, ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

## ಅಧ್ಯಾಯ–IV

## ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿರುವ ಮಲಹೊರುವ ಜಾಡಮಾಲಿಗಳನ್ನು ಗುರುತಿಸುವುದು ಮತ್ತು ಅವರ ಪುನರ್ವಸತಿ

11. **ಪುರಸಭೆಗಳು ನಗರ ಪ್ರದೇಶಗಳಲ್ಲಿರುವ ಮಲಹೊರುವ ಜಾಡಮಾಲಿಗಳ ಸಮೀಕ್ಷೆ ಮಾಡುವುದು.–** (1) ಯಾವುದೇ ಪುರಸಭೆಯು ತನ್ನ ಅಧಿಕಾರವ್ಯಾಪ್ತಿಯ ಪ್ರದೇಶದಲ್ಲಿ ಮಲಹೊರುವ ಜಾಡಮಾಲಿ ಕೆಲಸದಲ್ಲಿ ಕೆಲವು ವ್ಯಕ್ತಿಗಳನ್ನು ತೊಡಗಿಸಲಾಗಿದೆ ಅಥವಾ ನಿಯೋಜಿಸಲಾಗಿದೆ ಎಂದು ನಂಬಲು ಕಾರಣವಿದ್ದರೆ, ಅಂಥ ಪುರಸಭೆಯ ಕಾರ್ಯನಿರ್ವಾಹಕ ಅಧಿಕಾರಿಯು ಅಂಥ ವ್ಯಕ್ತಿಗಳನ್ನು ಗುರುತಿಸುವುದಕ್ಕೆ ಸಮೀಕ್ಷೆ ಮಾಡಿಸತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಹೇಳಿರುವ ಸಮೀಕ್ಷೆಯ ವಿಷಯಗಳು ಮತ್ತು ವಿಧಾನಗಳು ನಿಯಮಿಸಬಹುದಾದಂಥ ರೀತಿಯಲ್ಲಿರತಕ್ಕದ್ದು ಮತ್ತು ಅಂಥ ಸಮೀಕ್ಷೆ ಕಾರ್ಯವು ನಗರಪಾಲಿಕೆಗಳ ಸಂದರ್ಭದಲ್ಲಿ ಅದು ಪ್ರಾರಂಭವಾದ ದಿನಾಂಕದಿಂದ ಎರಡು ತಿಂಗಳ ಅವಧಿಯ ಒಳಗಾಗಿ ಮತ್ತು ಇತರ ಪುರಸಭೆಗಳ ಸಂದರ್ಭದಲ್ಲಿ ಒಂದು ತಿಂಗಳ ಅವಧಿಯೊಳಗಾಗಿ ಪೂರ್ಣಗೊಳ್ಳತಕ್ಕದ್ದು.

(3) ಪುರಸಭೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು, ತನ್ನ ಅಧಿಕಾರವ್ಯಾಪ್ತಿಗೆ ಒಳಪಟ್ಟ ಪ್ರದೇಶದಲ್ಲಿ ಸಮೀಕ್ಷೆ ಕಾರ್ಯವನ್ನು ಕೈಗೊಳ್ಳಬೇಕು ಹಾಗೂ ಅದರ ನಿಖರತೆಗಾಗಿ ಮತ್ತು ಸಮೀಕ್ಷೆ ಕಾರ್ಯವನ್ನು ಸಕಾಲಿಕವಾಗಿ ಪೂರ್ಣಗೊಳಿಸುವುದಕ್ಕೆ ಜವಾಬ್ದಾರನಾಗಿರತಕ್ಕದ್ದು.

(4) ಸಮೀಕ್ಷೆ ಕಾರ್ಯ ಪೂರ್ಣಗೊಂಡ ತರುವಾಯ, ಮುಖ್ಯಕಾರ್ಯನಿರ್ವಾಹಕ ಅಧಿಕಾರಿಯು, ತನ್ನ ಅಧಿಕಾರವ್ಯಾಪ್ತಿಯೊಳಗಿನ ಪೌರಸಭೆ ಪ್ರದೇಶದಲ್ಲಿ ಮಲಹೊರುವ ಜಾಡಮಾಲಿಗಳಾಗಿ ಕೆಲಸ ಮಾಡುತ್ತಿರುವುದಾಗಿ ಕಂಡುಬಂದ ಮತ್ತು ನಿಯಮಿಸಬಹುದಾದ ಅರ್ಹತಾ ಷರತ್ತುಗಳನ್ನು ಈಡೇರಿಸುವ ವ್ಯಕ್ತಿಗಳ ತಾತ್ಕಾಲಿಕ ಪಟ್ಟಿಯನ್ನು ಸಿದ್ಧಪಡಿಸುವಂತೆ ಮಾಡತಕ್ಕದ್ದು ಮತ್ತು ಅಂಥ ತಾತ್ಕಾಲಿಕ ಪಟ್ಟಿಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸತಕ್ಕದ್ದು ಮತ್ತು ಸಾರ್ವಜನಿಕರಿಂದ ಆ ಪಟ್ಟಿಗೆ ಆಕ್ಷೇಪಣೆಗಳನ್ನು ಆಹ್ವಾನಿಸತಕ್ಕದ್ದು.

(5) ಉಪಪ್ರಕರಣ (4)ಕ್ಕೆ ಅನುಸಾರವಾಗಿ ಪ್ರಕಟಿಸಿದ ತಾತ್ಕಾಲಿಕ ಪಟ್ಟಿಯಲ್ಲಿ ಯಾವುದೇ ಹೆಸರನ್ನು ಸೇರಿಸುವುದಕ್ಕೆ ಅಥವಾ ಅದರಿಂದ ಬಿಟ್ಟುಬಿಡುವುದಕ್ಕೆ ಯಾವುದೇ ಆಕ್ಷೇಪಣೆ ಇರುವ ಯಾರೇ ವ್ಯಕ್ತಿಯು ಅಂಥ ಪ್ರಕಟಣೆಯನ್ನು ಹೊರಡಿಸಿದ ಹದಿನೈದು ದಿನಗಳ ಅವಧಿಯೊಳಗಾಗಿ ಪುರಸಭೆಯು ಅಧಿಸೂಚಿಸಬಹುದಾದಂಥ ನಮೂನೆಯಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ತನ್ನ ಆಕ್ಷೇಪಣೆಯನ್ನು ಸಲ್ಲಿಸತಕ್ಕದ್ದು.

(6) ಉಪಪ್ರಕರಣ (5)ಕ್ಕೆ ಅನುಸಾರವಾಗಿ ಬಂದ ಎಲ್ಲಾ ಆಕ್ಷೇಪಣೆಗಳನ್ನು ವಿಚಾರಣೆ ಮಾಡತಕ್ಕದ್ದು ಮತ್ತು ತದನಂತರ, ಪುರಸಭೆಯ ಸ್ಥಳೀಯ ಸರಹದ್ದುಗಳ ಒಳಗೆ ಮಲಹೊರುವ ಜಾಡಮಾಲಿಗಳಾಗಿ ಕೆಲಸ ಮಾಡುತ್ತಿರುವುದಾಗಿ ಕಂಡುಬರುವ ವ್ಯಕ್ತಿಗಳ ಅಂತಿಮ ಪಟ್ಟಿಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸತಕ್ಕದ್ದು.

(7) ಮಲಹೊರುವ ಜಾಡಮಾಲಿಗಳಿಗೆ ಸಂಬಂಧಿಸಿದಂತೆ ಉಪಪ್ರಕರಣ (6)ರಲ್ಲಿ ಉಲ್ಲೇಖಿಸಿರುವ ಅಂತಿಮ ಪಟ್ಟಿಯನ್ನು ಪ್ರಕಟಿಸಿದ ಕೂಡಲೇ ಸದರಿ ಪಟ್ಟಿಯಲ್ಲಿ ಸೇರಿಸಿದ ವ್ಯಕ್ತಿಗಳನ್ನು, 6ನೇ ಪ್ರಕರಣದ (2)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಮಲಹೊರುವ ಜಾಡಮಾಲಿಗಳಾಗಿ ಕೆಲಸ ಮಾಡುವ ಯಾವುದೇ ಬಾಧ್ಯತೆಯಿಂದ ವಿಮೋಚನೆಗೊಳಿಸತಕ್ಕದ್ದು.

**12. ನಗರ ಪ್ರದೇಶದಲ್ಲಿ ಮಲಹೊರುವ ಜಾಡಮಾಲಿಯು ತನ್ನನ್ನು ಹಾಗೆಂದು ಗುರುತಿಸುವುದಕ್ಕೆ ಅರ್ಜಿ ಸಲ್ಲಿಸುವುದು.–** (1) ನಗರ ಪ್ರದೇಶದಲ್ಲಿ ಮಲಹೊರುವ ಜಾಡಮಾಲಿಯಾಗಿ ಕೆಲಸ ಮಾಡುವ ಯಾರೇ ವ್ಯಕ್ತಿಯು, ಅವನು ಯಾವ ಪುರಸಭೆಯ ಅಧಿಕಾರ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿರುವನೋ ಆ ಪುರಸಭೆಯು 11ನೇ ಪ್ರಕರಣಕ್ಕೆ ಅನುಸಾರವಾಗಿ ಕೈಗೊಂಡ ಸಮೀಕ್ಷೆಯ ಅವಧಿಯಲ್ಲಾಗಲೀ, ಅಥವಾ ತದನಂತರದ ಯಾವುದೇ ಸಮಯದಲ್ಲಾಗಲಿ ನಿಯಮಿಸಬಹುದಾದಂಥ ರೀತಿಯಲ್ಲಿ ಪುರಸಭೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ಅಥವಾ ಮಲಹೊರುವ ಜಾಡಮಾಲಿಯಾಗಿ ಕೆಲಸ ಮಾಡುತ್ತಿರುವವರನ್ನು ಗುರುತಿಸುವುದಕ್ಕಾಗಿ ಅವರಿಂದ ಅಧಿಕೃತನಾಗಿರುವಂತಹ ಯಾರೇ ಇತರ ಅಧಿಕಾರಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

(2) ಉಪಪ್ರಕರಣದ (1)ರಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ನಂತರ ಮುಖ್ಯ ಕಾರ್ಯನಿರ್ವಹಣಾಧಿಕಾರಿಯು, 11ನೇ ಪ್ರಕರಣದ ಮೇರೆಗೆ ಕೈಗೊಂಡ ಸಮೀಕ್ಷೆಯ ಭಾಗವಾಗಿ ಅಥವಾ ಅಂಥ ಸಮೀಕ್ಷೆಯು ನಡೆಯದಿರುವಾಗ, ಅರ್ಜಿದಾರನು ಮಲಹೊರುವ ಜಾಡಮಾಲಿಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಅಂಥ ಅರ್ಜಿಯನ್ನು ಸ್ವೀಕರಿಸಿದ ಹದಿನೈದು ದಿನಗಳೊಳಗೆ ವಿಚಾರಣೆ ನಡೆಸತಕ್ಕದ್ದು.

(3) 11ನೇ ಪ್ರಕರಣದ ಮೇರೆಗಿನ ಸಮೀಕ್ಷೆಯು ನಡೆಯದಿರುವಾಗ ಉಪಪ್ರಕರಣ (1)ರ ಮೇರೆಗೆ ಅರ್ಜಿ ಬಂದಿದ್ದರೆ, ಮತ್ತು (2)ನೇ ಉಪಪ್ರಕರಣದ ಅನುಸಾರವಾಗಿ ವಿಚಾರಣೆ ನಡೆಸಿದ ತರುವಾಯ, ಅರ್ಜಿಯಲ್ಲಿ ತಿಳಿಸಿರುವುದು ಸತ್ಯವೆಂದು ಕಂಡುಬಂದರೆ, 11ನೇ ಪ್ರಕರಣದ (6)ನೇ ಉಪಪ್ರಕರಣದ ಮೇರೆಗೆ ಪ್ರಕಟಿಸಿದ ಅಂತಿಮ ಪಟ್ಟಿಗೆ ಅಂಥ ವ್ಯಕ್ತಿಯ ಹೆಸರನ್ನು ಸೇರಿಸುವುದಕ್ಕೆ ಕ್ರಮತೆಗೆದುಕೊಳ್ಳತಕ್ಕದ್ದು ಮತ್ತು ಆ 11ನೇ ಪ್ರಕರಣದ (7)ನೇ ಉಪಪ್ರಕರಣದಲ್ಲಿ ಹೇಳಿರುವ ಪರಿಣಾಮಗಳು ಅನುಗತವಾಗತಕ್ಕದ್ದು.

**13. ಪುರಸಭೆಗಳು ಗುರುತಿಸಿದ ಮಲಹೊರುವ ಜಾಡಮಾಲಿ ವ್ಯಕ್ತಿಗಳ ಪುನರ್ವಸತಿ.–** (1) 11ನೇ ಪ್ರಕರಣದ (6)ನೇ ಉಪಪ್ರಕರಣದ ಅನುಸಾರವಾಗಿ ಪ್ರಕಟಿಸಿದ ಮಲಹೊರುವ ಜಾಡಮಾಲಿಗಳ ಅಂತಿಮ ಪಟ್ಟಿಯಲ್ಲಿ ಒಳಗೊಂಡಿರುವ ಅಥವಾ 12ನೇ ಪ್ರಕರಣದ (3)ನೇ ಉಪಪ್ರಕರಣದ ಅನುಸಾರವಾಗಿ ಅದರಲ್ಲಿ ಸೇರಿಸಿದ ಯಾರೇ ವ್ಯಕ್ತಿಗೆ, ಈ ಕೆಳಕಂಡ ರೀತಿಯಲ್ಲಿ ಪುನರ್ವಸತಿಯನ್ನು ಕಲ್ಪಿಸತಕ್ಕದ್ದು, ಎಂದರೆ:–

(ಎ) ಅವನಿಗೆ ಒಂದು ತಿಂಗಳ ಒಳಗಾಗಿ,–

(i) ಇತರ ವಿಷಯಗಳ ಜೊತೆಗೆ, ಅವನನ್ನು ಅವಲಂಬಿಸಿರುವ ಅವನ ಕುಟುಂಬದ ಎಲ್ಲಾ ಸದಸ್ಯರುಗಳ ವಿವರಗಳನ್ನು ಒಳಗೊಂಡ ಆತನ ಭಾವಚಿತ್ರವಿರುವ ಗುರುತಿನ ಚೀಟಿಯನ್ನು; ಮತ್ತು

(ii) ನಿಯಮಿಸಬಹುದಾದಂಥ ರೀತಿಯಲ್ಲಿ, ಆರಂಭದಲ್ಲಿ ಒಂದು ಬಾರಿನಗದು ಸಹಾಯವನ್ನು

– ನೀಡತಕ್ಕದ್ದು.

(ಬಿ) ಅವನ ಮಕ್ಕಳು ಸಂದರ್ಭಾನುಸಾರ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರಗಳ ಆಯಾಯ ಯೋಜನೆಗೆ ಅನುಸಾರವಾಗಿ ವಿದ್ಯಾರ್ಥಿವೇತನಕ್ಕೆ ಹಕ್ಕುಳ್ಳವರಾಗಿರತಕ್ಕದ್ದು ;

(ಸಿ) ಮಲಹೊರುವ ಜಾಡಮಾಲಿಯ ಅರ್ಹತೆಗೆ ಮತ್ತು ಇಚ್ಛೆಗೆ ಮತ್ತು ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ಯುಕ್ತ ಯೋಜನೆಯ ಉಪಬಂಧಗಳಿಗೆ ಒಳಪಟ್ಟು ವಾಸಿಸಲು ಒಂದು ಪ್ಲಾಟ್‌ನ್ನು ಹಂಚಿಕೆ ಮಾಡತಕ್ಕದ್ದು ಮತ್ತು ಮನೆ ನಿರ್ಮಾಣಕ್ಕಾಗಿ ಅಥವಾ ನಿರ್ಮಾಣಗೊಂಡ ಮನೆಗೆ ಹಣಕಾಸು ನೆರವನ್ನು ಮಾಡತಕ್ಕದ್ದು;

(ಡಿ) ಅವನಿಗೆ ಅಥವಾ ಕೋನೇಪಕ್ಷ ಅವನ ಕುಟುಂಬದ ಒಬ್ಬ ವಯಸ್ಕ ಸದಸ್ಯನಿಗೆ ಅರ್ಹತೆ ಮತ್ತು ಅವನ ಇಚ್ಛೆಗೆ ಒಳಪಟ್ಟು ಜೀವನೋಪಾಯದ ಕೌಶಲ್ಯ ತರಬೇತಿಯನ್ನು ನೀಡತಕ್ಕದ್ದು ಮತ್ತು ಅಂಥ ತರಬೇತಿಯ ಕಾಲಾವಧಿಯಲ್ಲಿ ಮೂರುಸಾವಿರ ರೂಪಾಯಿಗಳಿಗಿಂತಲೂ ಕಡಿಮೆಯಿಲ್ಲದ ಸ್ಟೈಫಂಡನ್ನು ಪ್ರತಿ ತಿಂಗಳು ಸಂದಾಯ ಮಾಡತಕ್ಕದ್ದು;

(ಇ) ಅವನಿಗೆ ಅಥವಾ ಕೋನೇಪಕ್ಷ ಅವನ ಕುಟುಂಬದ ಒಬ್ಬ ವಯಸ್ಕ ಸದಸ್ಯನಿಗೆ ಅರ್ಹತೆ ಮತ್ತು ಅವನ ಇಚ್ಛೆಗೆ ಒಳಪಟ್ಟು, ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ಆಯಾ ಯೋಜನೆಯಲ್ಲಿ ಗೊತ್ತುಮಾಡಬಹುದಾದಂಥ ರೀತಿಯಲ್ಲಿ ಸುಸ್ಥಿರವಾದ ಆಧಾರದ ಮೇಲೆ ಪರ್ಯಾಯ ಉದ್ಯೋಗವನ್ನು ಮಾಡುವುದಕ್ಕಾಗಿ ಸಹಾಯಧನ ಮತ್ತು ರಿಯಾಯಿತಿ ಸಾಲವನ್ನು ನೀಡತಕ್ಕದ್ದು;

(ಎಫ್) ಅವನಿಗೆ ಈ ಬಗ್ಗೆ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂಥ ಇತರ ಕಾನೂನು ಮತ್ತು ಕ್ರಮಬದ್ಧವಾದ ನೆರವನ್ನು ಒದಗಿಸತಕ್ಕದ್ದು.

(2) ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಮ್ಯಾಜಿಸ್ಟ್ರೇಟನು (1)ನೇ ಉಪಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಪ್ರತಿಯೊಬ್ಬ ಮಲಹೊರುವ ಜಾಡಮಾಲಿಗೆ ಪುನರ್ವಸತಿ ಕಲ್ಪಿಸಲು ಜವಾಬ್ದಾರನಾಗಿರತಕ್ಕದ್ದು ಮತ್ತು ಇದರ ಜೊತೆಗೆ ರಾಜ್ಯ ಸರ್ಕಾರವು ಅಥವಾ ಸಂಬಂಧಪಟ್ಟ ಜಿಲ್ಲಾ ಮ್ಯಾಜಿಸ್ಟ್ರೇಟನು, ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ಅಧೀನರಾದ ಅಧಿಕಾರಿಗಳಿಗೆ ತನ್ನ ಪರವಾಗಿ ಮತ್ತು ಸಂಬಂಧಪಟ್ಟ ಪುರಸಭೆಯ ಅಧಿಕಾರಿಗಳಿಗೆ ಜವಾಬ್ದಾರಿಗಳನ್ನು ವಹಿಸಬಹುದು.

**14. ಪಂಚಾಯಿತಿಗಳು ಗ್ರಾಮೀಣ ಪ್ರದೇಶದಲ್ಲಿರುವ ಮಲಹೊರುವ ಜಾಡಮಾಲಿಗಳ ಸಮೀಕ್ಷೆ ನಡೆಸುವುದು.–** ಯಾವುದೇ ಪಂಚಾಯಿತಿಗೆ, ತನ್ನ ಅಧಿಕಾರವ್ಯಾಪ್ತಿ ಇರುವ ಪ್ರದೇಶದಲ್ಲಿ ಮಲಹೊರುವ ಜಾಡಮಾಲಿಯ ಕೆಲಸದಲ್ಲಿ ಕೆಲವು ವ್ಯಕ್ತಿಗಳು ತೊಡಗಿದ್ದಾರೆಂದು ನಂಬಲು ಕಾರಣವಿದ್ದಲ್ಲಿ, ಅಂಥ ಪಂಚಾಯಿತಿಯ ಮುಖ್ಯಕಾರ್ಯನಿರ್ವಹಣಾಧಿಕಾರಿಯು ಅಂಥ ವ್ಯಕ್ತಿಗಳನ್ನು ಗುರುತಿಸುವುದಕ್ಕೆ 11ನೇ ಮತ್ತು 12ನೇ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ, ಯಥೋಚಿತ ವ್ಯತ್ಯಾಸಗಳೊಂದಿಗೆ, ಅಂಥ ಮಲಹೊರುವ ಜಾಡಮಾಲಿಗಳ ಸಮೀಕ್ಷೆಯನ್ನು ಕೈಗೊಳ್ಳತಕ್ಕದ್ದು.

**15. ಗ್ರಾಮೀಣ ಪ್ರದೇಶದಲ್ಲಿ ಮಲಹೊರುವ ಜಾಡಮಾಲಿಯು ತನ್ನನ್ನು ಹಾಗೆಂದು ಗುರುತಿಸುವುದಕ್ಕೆ ಅರ್ಜಿ ಸಲ್ಲಿಸುವುದು.–** (1) ಗ್ರಾಮೀಣ ಪ್ರದೇಶದಲ್ಲಿ ಮಲಹೊರುವ ಜಾಡಮಾಲಿಯಾಗಿ ಕೆಲಸ ಮಾಡುವ ಯಾರೇ ವ್ಯಕ್ತಿಯು, ಅವನು ಯಾವ ಪಂಚಾಯತಿ ಅಧಿಕಾರವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿರುವನೋ 14ನೇ ಪ್ರಕರಣಕ್ಕೆ ಅನುಸಾರವಾಗಿ ಆ ಪಂಚಾಯತಿಯು ಕೈಗೊಂಡ ಸಮೀಕ್ಷೆಯ ಅವಧಿಯಲ್ಲಾಗಲೀ, ಅಥವಾ ತದನಂತರದ ಯಾವುದೇ ಸಮಯದಲ್ಲಾಗಲೀ, ನಿಯಮಿಸಬಹುದಾದಂಥ ರೀತಿಯಲ್ಲಿ ಸಂಬಂಧಪಟ್ಟ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ಅಥವಾ ಮಲಹೊರುವ ಜಾಡಮಾಲಿಯಾಗಿ ಕೆಲಸ ಮಾಡುತ್ತಿರುವವರನ್ನು ಗುರುತಿಸುವುದಕ್ಕಾಗಿ ಅವರಿಂದ ಅಧಿಕೃತನಾಗಿರುವಂತಹ ಯಾರೇ ಇತರ ಅಧಿಕಾರಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

(2) ಉಪಪ್ರಕರಣದ (1)ರ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ನಂತರ ಮುಖ್ಯ ಕಾರ್ಯನಿರ್ವಹಣಾಧಿಕಾರಿಯು, 14ನೇ ಪ್ರಕರಣದ ಮೇರೆಗೆ ಕೈಗೊಂಡ ಸಮೀಕ್ಷೆಯ ಭಾಗವಾಗಿ ಅಥವಾ ಅಂಥ ಸಮೀಕ್ಷೆಯು ನಡೆಯದಿರುವಾಗ, ಅರ್ಜಿದಾರನು ಮಲಹೊರುವ ಜಾಡಮಾಲಿಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಅಂಥ ಅರ್ಜಿಯನ್ನು ಸ್ವೀಕರಿಸಿದ ಹದಿನೈದು ದಿನಗಳೊಳಗೆ ವಿಚಾರಣೆ ನಡೆಸತಕ್ಕದ್ದು.

**16. ಪಂಚಾಯಿತಿಯು ಗುರುತಿಸಿದ ಮಲಹೊರುವ ಜಾಡಮಾಲಿ ವ್ಯಕ್ತಿಗಳ ಪುನರ್ವಸತಿ.–** 14ನೇ ಪ್ರಕರಣದ ಅನುಸಾರವಾಗಿ ಪ್ರಕಟಿಸಿದ ಮಲಹೊರುವ ಜಾಡಮಾಲಿಗಳ ಅಂತಿಮ ಪಟ್ಟಿಯಲ್ಲಿ ಒಳಗೊಂಡಿರುವ ಅಥವಾ 15ನೇ ಪ್ರಕರಣದ (2)ನೇ ಉಪಪ್ರಕರಣದ ಅನುಸಾರವಾಗಿ ಅದಕ್ಕೆ ಸೇರ್ಪಡೆಗೊಂಡ ಯಾರೇ ವ್ಯಕ್ತಿಗೆ ನಗರ ಪ್ರದೇಶದ ಮಲಹೊರುವ ಜಾಡಮಾಲಿಗಳಿಗಾಗಿ 13ನೇ ಪ್ರಕರಣದಲ್ಲಿ ಹೇಳಿರುವ ರೀತಿಯಲ್ಲಿಯೇ ಯಥೋಚಿತ ವ್ಯತ್ಯಾಸಗಳೊಂದಿಗೆ ಪುನರ್ವಸತಿಯನ್ನು ಕಲ್ಪಿಸತಕ್ಕದ್ದು.

## ಅಧ್ಯಾಯ–V

## ಅನುಷ್ಠಾನ ಪ್ರಾಧಿಕಾರಗಳು

**17. ಶುಚಿಯಾಗಿಲ್ಲದ ಶೌಚಾಲಯಗಳ ಸಮಾಪ್ತಿಯನ್ನು ಖಚಿತಪಡಿಸಿಕೊಳ್ಳುವುದು ಸ್ಥಳೀಯ ಪ್ರಾಧಿಕಾರಗಳ ಜವಾಬ್ದಾರಿ.–** ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಪ್ರತಿಯೊಂದು ಸ್ಥಳೀಯ ಪ್ರಾಧಿಕಾರವು ಜಾಗೃತಿ ಆಂದೋಲನದ ಮೂಲಕ ಅಥವಾ ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಒಂಭತ್ತು ತಿಂಗಳ ಅವಧಿಯ ಮುಕ್ತಾಯದ ತರುವಾಯ ಇತರ ರೀತಿಯಲ್ಲಿ,–

(i) ಅದರ ಅಧಿಕಾರವ್ಯಾಪ್ತಿಯೊಳಗಿರುವ ಪ್ರದೇಶದಲ್ಲಿ ಶುಚಿಯಾಗಿಲ್ಲದ ಶೌಚಾಲಯಗಳನ್ನು ನಿರ್ಮಿಸಿರುವುದಿಲ್ಲ, ನಿರ್ವಹಿಸುತ್ತಿರುವುದಿಲ್ಲ ಮತ್ತು ಬಳಕೆ ಮಾಡುತ್ತಿರುವುದಿಲ್ಲ ಎಂಬುದನ್ನು; ಮತ್ತು

(ii) ಖಂಡ (1)ಅನ್ನು ಉಲ್ಲಂಘನೆ ಮಾಡಿದ ಸಂದರ್ಭದಲ್ಲಿ, 5ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಶೌಚಾಲಯದ ಅಧಿಭೋಗದಾರನ ವಿರುದ್ಧ ಕ್ರಮತೆಗೆದುಕೊಳ್ಳಲಾಗಿದೆ ಎಂಬುದನ್ನು

– ಖಚಿತಪಡಿಸಿಕೊಳ್ಳುವುದು ಅದರ ಜವಾಬ್ದಾರಿಯಾಗಿರತಕ್ಕದ್ದು.

**18. ಈ ಅಧಿನಿಯಮದ ಉಪಬಂಧಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ನಿರ್ದಿಷ್ಟಪಡಿಸಬಹುದಾದ ಪ್ರಾಧಿಕಾರಿಗಳು.–** ಸಮುಚಿತ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಸಮರ್ಪಕವಾಗಿ ಕಾರ್ಯಗತಗೊಳಿಸಲಾಗುತ್ತಿದೆ ಎಂಬುದನ್ನು

ಸುನಿಶ್ಚಿತಪಡಿಸಿಕೊಳ್ಳಲು ಅವಶ್ಯಕವೆನಿಸಬಹುದಾದಂಥ ಅಧಿಕಾರಗಳನ್ನು ಸ್ಥಳೀಯ ಪ್ರಾಧಿಕಾರಕ್ಕೆ ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಪ್ರದಾನ ಮಾಡಬಹುದು ಮತ್ತು ಅವರಿಗೆ ಅಂಥ ಕರ್ತವ್ಯಗಳನ್ನು ವಿಧಿಸಬಹುದು. ಸ್ಥಳೀಯ ಪ್ರಾಧಿಕಾರವು ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟನು ಹಾಗೆ ಪ್ರದಾನ ಮಾಡಿದ ಅಥವಾ ವಿಧಿಸಿದ ಎಲ್ಲ ಅಥವಾ ಯಾವುವೇ ಅಧಿಕಾರಗಳನ್ನು ಚಲಾಯಿಸಲು ಮತ್ತು ಎಲ್ಲ ಅಥವಾ ಯಾವುವೇ ಕರ್ತವ್ಯಗಳನ್ನು ನೆರವೇರಿಸಲು ಅಧೀನ ಅಧಿಕಾರಿಗಳನ್ನು ನಿರ್ದಿಷ್ಟಪಡಿಸಬಹುದು ಮತ್ತು ಹಾಗೆ ನಿರ್ದಿಷ್ಟಪಡಿಸಿದ ಅಧಿಕಾರಿಯು ಅಥವಾ ಅಧಿಕಾರಿಗಳು ಅಂಥ ಅಧಿಕಾರಗಳನ್ನು ಅಥವಾ ಅಂಥ ಕರ್ತವ್ಯಗಳನ್ನು ಯಾವ ಸ್ಥಳೀಯ ಸರಹದ್ದುಗಳೊಳಗೆ ಚಲಾಯಿಸತಕ್ಕದ್ದೋ ಅಥವಾ ನಿರ್ವಹಿಸತಕ್ಕದ್ದೋ ಆ ಸರಹದ್ದುಗಳನ್ನು ನಿರ್ದಿಷ್ಟಪಡಿಸಬಹುದು.

19. **ಜಿಲ್ಲಾ ಮ್ಯಾಜಿಸ್ಟ್ರೇಟರ ಮತ್ತು ಅಧಿಕೃತ ಅಧಿಕಾರಿಗಳ ಕರ್ತವ್ಯಗಳು.–** 18ನೇ ಪ್ರಕರಣದ ಮೇರೆಗೆ ಜಿಲ್ಲಾ ಮ್ಯಾಜಿಸ್ಟ್ರೇಟ್‌ನು ಮತ್ತು ಅಧಿಕೃತ ಅಧಿಕಾರಿಯು ಅಥವಾ ಆ ಪ್ರಕರಣದ ಮೇರೆಗೆ ಅವರು ನಿರ್ದಿಷ್ಟಪಡಿಸಿದ ಇತರ ಯಾರೇ ಅಧೀನ ಅಧಿಕಾರಿಗಳು ಈ ಅಧಿನಿಯಮದ ಉದ್ದೇಶಕ್ಕಾಗಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯು ಮುಕ್ತಾಯವಾದ ತರುವಾಯ,–

(ಎ) ಅವರವರ ಅಧಿಕಾರವ್ಯಾಪ್ತಿಯೊಳಗಿನ ಪ್ರದೇಶದಲ್ಲಿ ಯಾರೇ ವ್ಯಕ್ತಿಯು ಮಲಹೊರುವ ಜಾಡಮಾಲಿಯ ಕೆಲಸದಲ್ಲಿ ನಿರತನಾಗಿಲ್ಲವೆಂಬುದನ್ನು ಮತ್ತು ನಿಯೋಜನೆಗೊಂಡಿಲ್ಲವೆಂಬುದನ್ನು;

(ಬಿ) ಯಾರೊಬ್ಬರೂ ಶುಚಿಯಾಗಿಲ್ಲದ ಶೌಚಾಲಯವನ್ನು ನಿರ್ಮಿಸಿಲ್ಲ, ನಿರ್ವಹಿಸುತ್ತಿಲ್ಲ, ಬಳಸುತ್ತಿಲ್ಲ ಎಂಬುದನ್ನು ಅಥವಾ ಅದು ಬಳಕೆಗೆ ಲಭ್ಯವಾಗುವಂತೆ ಮಾಡಿಲ್ಲ ಎಂಬುದನ್ನು;

(ಸಿ) ಈ ಅಧಿನಿಯಮದ ಮೇರೆಗೆ ಗುರುತಿಸಲ್ಪಟ್ಟ ಮಲಹೊರುವ ಜಾಡಮಾಲಿಗಳಿಗೆ 13ನೇ ಪ್ರಕರಣದ ಅಥವಾ ಸಂದರ್ಭಾನುಸಾರ 16ನೇ ಪ್ರಕರಣದ ಅನುಸಾರವಾಗಿ ಪುನರ್ವಸತಿ ಕಲ್ಪಿಸಲಾಗಿದೆ ಎಂಬುದನ್ನು;

(ಡಿ) 5ನೇ ಪ್ರಕರಣದ ಅಥವಾ 6ನೇ ಪ್ರಕರಣದ ಅಥವಾ 7ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘನೆ ಮಾಡಿದ ವ್ಯಕ್ತಿಗಳನ್ನು ಈ ಅಧಿನಿಯಮದ ಉಪಬಂಧಗಳ ಮೇರೆಗೆ ವಿಚಾರಣೆ ಮಾಡಲಾಗಿದೆ ಮತ್ತು ಆ ಬಗ್ಗೆ ಪ್ರಾಸಿಕ್ಯೂಷನ್ ಕ್ರಮ ಜರುಗಿಸಲಾಗಿದೆ; ಮತ್ತು

(ಇ) ತನ್ನ ಅಧಿಕಾರವ್ಯಾಪ್ತಿಯೊಳಗೆ ಅನ್ವಯವಾಗುವ ಈ ಅಧಿನಿಯಮದ ಎಲ್ಲಾ ಉಪಬಂಧಗಳನ್ನು ಸೂಕ್ತವಾಗಿ ಪಾಲನೆ ಮಾಡಲಾಗಿದೆ ಎಂಬುದನ್ನು

– ಖಚಿತಪಡಿಸಿಕೊಳ್ಳತಕ್ಕದ್ದು.

20. **ಇನ್‌ಸ್ಪೆಕ್ಟರ್‌ಗಳ ನೇಮಕ ಮತ್ತು ಅವರ ಅಧಿಕಾರಗಳು.–** (1) ಸಮುಚಿತ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳಿಗಾಗಿ ಸೂಕ್ತವೆಂದು ತಾನು ಭಾವಿಸಬಹುದಾದಂಥ ವ್ಯಕ್ತಿಗಳನ್ನು ಇನ್‌ಸ್ಪೆಕ್ಟರ್‌ಗಳನ್ನಾಗಿ ನೇಮಕ ಮಾಡಬಹುದು ಮತ್ತು ಈ ಅಧಿನಿಯಮದ ಮೇರೆಗೆ ಅವರು ತಮ್ಮ ಅಧಿಕಾರಗಳನ್ನು ಚಲಾಯಿಸಲು ಅವರಿಗೆ ಸ್ಥಳೀಯ ಸರಹದ್ದುಗಳನ್ನು ಗೊತ್ತುಪಡಿಸತಕ್ಕದ್ದು.

(2) ಈ ಸಂಬಂಧದಲ್ಲಿ ರಚಿಸಿದ ಯಾವುದೇ ನಿಯಮಗಳಿಗೆ ಒಳಪಟ್ಟು ಇನ್‌ಸ್ಪೆಕ್ಟರ್‌ನು,–

(ಎ) ಈ ಅಧಿನಿಯಮದ ಮೇರೆಗೆ ಅಪರಾಧವನ್ನು ಮಾಡಲಾಗಿದೆಯೆಂದು ಅಥವಾ ಮಾಡಲಾಗುತ್ತಿದೆಯೆಂದು ಅಥವಾ ಮಾಡಲಿರುವುದಾಗಿ ನಂಬಲು ತನಗೆ ಕಾರಣವಿದೆಯೋ ಆ ಯಾವುವೇ ಆವರಣಗಳನ್ನು ಅಥವಾ ಸ್ಥಳವನ್ನು ತಪಾಸಣೆ ಮಾಡುವ ಅಥವಾ ಯಾವುದೇ ಶೌಚಾಲಯವನ್ನು, ತೆರೆದ ಚರಂಡಿಯನ್ನು, ಅಥವಾ ಗುಂಡಿಯನ್ನು ಪರೀಕ್ಷಿಸುವ ಅಥವಾ ಶೋಧನೆ ಮಾಡುವ ಮತ್ತು ಯಾರೇ ವ್ಯಕ್ತಿಯನ್ನು ಮಲಹೊರುವ ಜಾಡಮಾಲಿಯಾಗಿ ನಿಯೋಜಿಸುವುದನ್ನು ತಡೆಯುವ;

(ಬಿ) ಅಂಥ ಆವರಣಗಳಲ್ಲಿ ಅಥವಾ ಸ್ಥಳಗಳಲ್ಲಿ ಕಂಡು ಬರುವ ಮತ್ತು ಅಲ್ಲಿ ಮಲಹೊರುವ ಜಾಡಮಾಲಿಯಾಗಿ ನಿಯೋಜಿತನಾಗಿದ್ದಾನೆಂದು ಯುಕ್ತವಾಗಿ ತನಗೆ ನಂಬಲು ಕಾರಣವಿರುವ ಅಥವಾ ಅನ್ಯಥಾ ಈ ಅಧಿನಿಯಮದ ಉಪಬಂಧಗಳನ್ನು ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳನ್ನು ಪಾಲನೆ ಮಾಡಿರುವ ಅಥವಾ ಪಾಲನೆ ಮಾಡದಿರುವ ಬಗ್ಗೆ ಮಾಹಿತಿಯನ್ನು ಒದಗಿಸುವ ಸ್ಥಿತಿಯಲ್ಲಿರುವ ಯಾರೇ ವ್ಯಕ್ತಿಯನ್ನು ವಿಚಾರಣೆ ಮಾಡುವ;

(ಸಿ) ಅಂಥ ಆವರಣಗಳಲ್ಲಿ ಕಂಡುಬಂದ ಯಾರೇ ವ್ಯಕ್ತಿಯನ್ನು, ಅಂಥ ಆವರಣಗಳಲ್ಲಿ ಮಲಹೊರುವ ಜಾಡಮಾಲಿಯಾಗಿ ನಿಯೋಜಿಸಿದ ವ್ಯಕ್ತಿಗಳ ಹೆಸರುಗಳಿಗೆ ಮತ್ತು ವಿಳಾಸಗಳಿಗೆ ಮತ್ತು ಅವರನ್ನು ಮಲಹೊರುವ ಜಾಡಮಾಲಿಯ ಕೆಲಸಕ್ಕೆ ನಿಯೋಜಿಸಿಕೊಂಡ ಅಥವಾ ತೊಡಗಿಸಿಕೊಂಡ ವ್ಯಕ್ತಿಗಳಿಗೆ ಅಥವಾ ಏಜೆನ್ಸಿಗೆ ಸಂಬಂಧಪಟ್ಟಂತೆ ಅವನ ಬಳಿ ಇರುವ ಮಾಹಿತಿಯನ್ನು ನೀಡುವಂತೆ ಅಗತ್ಯಪಡಿಸುವ;

(ಡಿ) ಪ್ರಧಾನ ನಿಯೋಜಕನು ಅಥವಾ ಏಜೆನ್ಸಿಯು, ಈ ಅಧಿನಿಯಮದ ಮೇರೆಗಿನ ಯಾವ ಅಪರಾಧವನ್ನು ಎಸಗಿದ್ದಾನೆಂದು ನಂಬಲು ತನಗೆ ಕಾರಣವಿರುವುದೋ ಆ ಅಪರಾಧಕ್ಕೆ ಸಂಬಂಧಪಟ್ಟಂತೆ ಸುಸಂಗತವೆಂದು ತಾನು ಪರಿಗಣಿಸಬಹುದಾದಂಥ ರಿಜಿಸ್ಟರ್‌ಗಳನ್ನು, ಮಜೂರಿಗಳ ದಾಖಲೆಗಳನ್ನು ಅಥವಾ ನೋಟೀಸುಗಳನ್ನು ಅಥವಾ ಅವುಗಳ ಭಾಗಗಳ ದಾಖಲೆಯನ್ನು ಜಪ್ತಿ ಮಾಡುವ ಅಥವಾ ಅದರ ಪ್ರತಿಗಳನ್ನು ತೆಗೆದುಕೊಳ್ಳುವ; ಮತ್ತು

(ಇ) ನಿಯಮಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸುವ

– ಉದ್ದೇಶಕ್ಕಾಗಿ ತನ್ನ ಅಧಿಕಾರವ್ಯಾಪ್ತಿಯ ಸ್ಥಳೀಯ ಸರಹದ್ದುಗಳೊಳಗೆ ಇರುವ ಯಾವುವೇ ಆವರಣಗಳನ್ನು ಅಥವಾ ಸ್ಥಳವನ್ನು ಅವಶ್ಯವೆಂದು ತಾನು ಪರಿಗಣಿಸುವಂಥ ನೆರವಿನೊಂದಿಗೆ ಎಲ್ಲಾ ಸಮಂಜಸ ಸಮಯದಲ್ಲಿ ಪ್ರವೇಶ ಮಾಡಬಹುದು.

(3) ಉಪಪ್ರಕರಣದ (2)ರ ಮೇರೆಗೆ ಯಾವುದೇ ದಸ್ತಾವೇಜನ್ನು ಅಥವಾ ವಸ್ತುವನ್ನು ಹಾಜರುಪಡಿಸುವಂತೆ ಅಥವಾ ಯಾವುದೇ ಮಾಹಿತಿಯನ್ನು ನೀಡುವಂತೆ ಇನ್ಸ್‌ಪೆಕ್ಟರ್‌ನು ಅಗತ್ಯಪಡಿಸಿದ ಯಾರೇ ವ್ಯಕ್ತಿಯು ಭಾರತ ದಂಡ ಸಂಹಿತೆಯ (1860ರ 45)ರ 175ನೇ ಪ್ರಕರಣ ಮತ್ತು 176ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಹಾಗೆ ಮಾಡುವುದು ಕಾನೂನುಬದ್ಧವಾದುದೆಂದು ಭಾವಿಸತಕ್ಕದ್ದು.

(4) ದಂಡ ಪ್ರಕ್ರಿಯಾ ಸಂಹಿತೆ 1973 (1974ರ 2)ರ ಉಪಬಂಧಗಳು, (2)ನೇ ಉಪಪ್ರಕರಣದ ಮೇರೆಗೆ ಮಾಡುವ ಅಂಥ ಯಾವುದೇ ಶೋಧನೆಗೆ ಅಥವಾ ಜಪ್ತಿಗೆ ಸದರಿ ಸಂಹಿತೆಯ 94ನೇ ಪ್ರಕರಣದ ಮೇರೆಗೆ ಹೊರಡಿಸಿದ ವಾರಂಟಿನ ಅಧಿಕಾರದ ಮೇರೆಗೆ ಮಾಡಿದ ಶೋಧನೆಗೆ ಅಥವಾ ಜಪ್ತಿಗೆ ಅನ್ವಯವಾಗುವಂತೆಯೇ ಅವು ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಅನ್ವಯವಾಗತಕ್ಕದ್ದು.

## ಅಧ್ಯಾಯ–VI

## ಅಧಿವಿಚಾರಣೆಯ ಕಾರ್ಯವಿಧಾನ

**21. ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್‌ರವರು ಅಪರಾಧಗಳನ್ನು ಅಧಿವಿಚಾರಣೆ ಮಾಡುವುದು.**– (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಮೇರೆಗೆ ಅಪರಾಧಗಳ ಅಧಿವಿಚಾರಣೆಗಾಗಿ ಪ್ರಥಮ ದರ್ಜೆಯ ನ್ಯಾಯಿಕ ಮ್ಯಾಜಿಸ್ಟ್ರೇಟರಿಗೆ ಇರುವಂಥ ಅಧಿಕಾರಗಳನ್ನು ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರಿಗೆ ಪ್ರದಾನ ಮಾಡಬಹುದು ಮತ್ತು ಅಂಥ ಅಧಿಕಾರಗಳನ್ನು ಪ್ರದಾನ ಮಾಡಿದಾಗ ಯಾವ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರಿಗೆ ಅಂಥ ಅಧಿಕಾರಗಳನ್ನು ಪ್ರದಾನ ಮಾಡಲಾಗಿದೆಯೋ ಆ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರನ್ನು ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಉದ್ದೇಶಗಳಿಗಾಗಿ ಪ್ರಥಮ ದರ್ಜೆಯ ನ್ಯಾಯಿಕ ಮ್ಯಾಜಿಸ್ಟ್ರೇಟರೆಂದು ಭಾವಿಸತಕ್ಕದ್ದು.

(2) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕ್ಷಿಪ್ರವಾಗಿ ಅಧಿವಿಚಾರಣೆ ಮಾಡತಕ್ಕದ್ದು.

**22. ಅಪರಾಧವು ಸಂಜ್ಞಾನಕ್ಕೆ ತೆಗೆದುಕೊಳ್ಳುವಂಥದ್ದು ಮತ್ತು ಜಾಮೀನೀಯವಲ್ಲದ್ದು ಆಗಿರುವುದು.**– ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಪ್ರತಿಯೊಂದು ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದು ಮತ್ತು ಅದು ಜಾಮೀನೀಯವಲ್ಲದ್ದು ಆಗಿರತಕ್ಕದ್ದು.

**23. ಕಂಪನಿಗಳಿಂದ ಅಪರಾಧಗಳು.**–(1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿ ಮಾಡಿದ್ದರೆ, ಆ ಅಪರಾಧವು ನಡೆದ ಕಾಲದಲ್ಲಿ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಅದರ ವ್ಯವಹಾರವನ್ನು ನಡೆಸುವುದಕ್ಕೆ ಆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪನಿಯನ್ನು ಆ ಅಪರಾಧದ ತಪ್ಪಿತಸ್ಥ ಎಂಬುದಾಗಿ ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ತಮ್ಮ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡಿತರಾಗತಕ್ಕದ್ದು.

(2) ಉಪಪ್ರಕರಣ(1)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿದ್ದರೆ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಅವನ ಯಾವುದೇ ನಿರ್ಲಕ್ಷ್ಯದ ಕಾರಣದಿಂದ ನಡೆಯಿತೆಂದು ಆರೋಪಿಸಿರುವುದು ರುಜುವಾತಾದರೆ, ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನು ವ್ಯವಹರಣೆಗೆ ಗುರಿಯಾಗತಕ್ಕದ್ದು ಹಾಗೂ ತದನುಸಾರವಾಗಿ ದಂಡಿತನಾಗತಕ್ಕದ್ದು.

**ವಿವರಣೆ.**– ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಕಂಪನಿ" ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಅದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಿಸಿದಂತೆ "ನಿರ್ದೇಶಕ" ಎಂದರೆ ಫರ್ಮಿನಲ್ಲಿನ ಪಾಲುದಾರ.

## ಅಧ್ಯಾಯ–VII

## ಜಾಗೃತ ಸಮಿತಿಗಳು

**24. ಜಾಗೃತ ಸಮಿತಿಗಳು.**–(1) ಪ್ರತಿಯೊಂದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಪ್ರತಿಯೊಂದು ಜಿಲ್ಲೆಯಲ್ಲಿ ಮತ್ತು ಪ್ರತಿಯೊಂದು ಉಪವಿಭಾಗದಲ್ಲಿ ಒಂದು ಜಾಗೃತ ಸಮಿತಿಯನ್ನು ರಚಿಸತಕ್ಕದ್ದು.

(2) ಪ್ರತಿ ಜಿಲ್ಲೆಗೆ ರಚಿತವಾದ ಪ್ರತಿಯೊಂದು ಜಾಗೃತ ಸಮಿತಿಯು ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ ,–

(ಎ) ಜಿಲ್ಲಾ ಮ್ಯಾಜಿಸ್ಟ್ರೇಟ್‌ರವರು – ಅಧ್ಯಕ್ಷರು, ಪದನಿಮಿತ್ತ;

(ಬಿ) ಜಿಲ್ಲೆಯಿಂದ ಚುನಾಯಿತರಾದ ಅನುಸೂಚಿತ ಜಾತಿಗಳಿಗೆ ಸೇರಿದ ರಾಜ್ಯ ವಿಧಾನಮಂಡಲದ ಎಲ್ಲಾ ಸದಸ್ಯರು – ಸದಸ್ಯರು:

ಪರಂತು, ಆ ಜಿಲ್ಲೆಯಲ್ಲಿ ಅನುಸೂಚಿತ ಜಾತಿಗಳಿಗೆ ಸೇರಿದ ರಾಜ್ಯ ವಿಧಾನಮಂಡಲದ ಸದಸ್ಯರು ಇಲ್ಲದಿದ್ದರೆ, ರಾಜ್ಯ ಸರ್ಕಾರವು ಆ ಜಿಲ್ಲೆಯಿಂದ ಚುನಾಯಿತರಾದ ರಾಜ್ಯ ವಿಧಾನ ಮಂಡಲದ ಇತರ ಸದಸ್ಯರುಗಳಲ್ಲಿ ಸೂಕ್ತವೆಂದು ತಾನು ಭಾವಿಸಬಹುದಾದಷ್ಟು ಸಂಖ್ಯೆಯ ಸದಸ್ಯರನ್ನು, ಇಬ್ಬರನ್ನು ಮೀರದಂತೆ ನಾಮನಿರ್ದೇಶನ ಮಾಡಬಹುದು.

(ಸಿ) ಜಿಲ್ಲೆಯ ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟ್‌ರವರು–ಸದಸ್ಯರು, ಪದನಿಮಿತ್ತ;

(ಡಿ) ಜಿಲ್ಲಾಮಟ್ಟದ ಜಿಲ್ಲಾ ಪಂಚಾಯತಿಯ,–

(i) ಮುಖ್ಯಕಾರ್ಯನಿರ್ವಾಹಕ ಅಧಿಕಾರಿ – ಸದಸ್ಯ, ಪದನಿಮಿತ್ತ;

(ii) ಜಿಲ್ಲಾ ಕೇಂದ್ರ ಕಛೇರಿಗಳ ಪುರಸಭೆಯ – ಸದಸ್ಯ, ಪದನಿಮಿತ್ತ;

(iii) ಜಿಲ್ಲೆಯಲ್ಲಿ ರಚಿತವಾದ ಯಾವುದೇ ಇತರ ನಗರ ಪಾಲಿಕೆಯ –ಸದಸ್ಯ, ಪದನಿಮಿತ್ತ;

(iv) ಜಿಲ್ಲೆಯಲ್ಲಿ ಯಾವುದಾದರೂ ದಂಡುಪ್ರದೇಶದ ಮಂಡಳಿ ಸ್ಥಾಪನೆಯಾಗಿದ್ದರೆ ಅದರ –ಸದಸ್ಯ, ಪದನಿಮಿತ್ತ;

(ಇ) ಜಿಲ್ಲೆಯಲ್ಲಿರುವ ರೈಲ್ವೆ ಪ್ರಾಧಿಕಾರವು ನಾಮನಿರ್ದೇಶನ ಮಾಡುವ ಒಬ್ಬ ಪ್ರತಿನಿಧಿ;

(ಎಫ್) ಜಿಲ್ಲೆಯಲ್ಲಿ ಮಲಹೊರುವ ಜಾಡಮಾಲಿ ಕೆಲಸವನ್ನು ನಿಷೇಧಿಸುವುದಕ್ಕಾಗಿ ಮತ್ತು ಮಲಹೊರುವ ಜಾಲಮಾಲಿಗಳ ಪುನರ್ವಸತಿಗಾಗಿ ಕೆಲಸ ಮಾಡುತ್ತಿರುವ ಸಂಘಸಂಸ್ಥೆಗಳಿಗೆ ಸೇರಿದ ಅಥವಾ ಜಾಡಮಾಲಿ ಸಮುದಾಯವನ್ನು ಪ್ರತಿನಿಧಿಸುವ, ಆ ಜಿಲ್ಲೆಯಲ್ಲಿ ವಾಸಿಸುತ್ತಿರುವ ಜಿಲ್ಲೆಯ ಮ್ಯಾಜಿಸ್ಟ್ರೇಟ್‌ರವರಿಂದ ನಾಮನಿರ್ದೇಶಿತರಾದ, ನಾಲ್ಕು ಮಂದಿಯನ್ನು ಮೀರದಂಥ ಸಾಮಾಜಿಕ ಕಾರ್ಯಕರ್ತರುಗಳು. ಅವರಲ್ಲಿ ಇಬ್ಬರು ಮಹಿಳೆಯರು ಇರತಕ್ಕದ್ದು.

(ಜಿ) ಜಿಲ್ಲೆಯಲ್ಲಿ ಹಣಕಾಸು ಮತ್ತು ಸಾಲ ನೀಡಿಕೆ ವ್ಯವಹಾರವನ್ನು ನಡೆಸುವ ಸಂಸ್ಥೆಗಳನ್ನು ಪ್ರತಿನಿಧಿಸುವ, ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರಿಂದ ನಾಮನಿರ್ದೇಶಿತನಾದ ಒಬ್ಬ ವ್ಯಕ್ತಿ;

(ಹೆಚ್) ಜಿಲ್ಲಾಮಟ್ಟದ ಅನುಸೂಚಿತ ಜಾತಿಗಳ ಕಲ್ಯಾಣದ ಪ್ರಭಾರಿ ಅಧಿಕಾರಿ

– ಸದಸ್ಯ ಕಾರ್ಯದರ್ಶಿ – ಪದನಿಮಿತ್ತ

(ಐ) ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ರಾಜ್ಯ ಸರ್ಕಾರದ ಸಾಮಾನ್ಯ ಆದೇಶ ಯಾವುದಾದರೂ ಇದ್ದರೆ, ಅದಕ್ಕೆ ಒಳಪಟ್ಟು, ಈ ಅಧಿನಿಯಮದ ಉದ್ದೇಶವನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಯಾವ ಏಜೆನ್ಸಿಗಳು ಮಹತ್ವದ ಪಾತ್ರ ವಹಿಸುತ್ತವೆಂದು ಮ್ಯಾಜಿಸ್ಟ್ರೇಟನು ಅಭಿಪ್ರಾಯಪಡುವನೋ ಆ ಜಿಲ್ಲಾ ಏಜೆನ್ಸಿಗಳು.

(3) ಉಪ-ವಿಭಾಗಕ್ಕಾಗಿ ರಚಿತವಾದ ಪ್ರತಿಯೊಂದು ಜಾಗೃತ ಸಮಿತಿಯು ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಉಪ–ವಿಭಾಗೀಯ ಮ್ಯಾಜಿಸ್ಟ್ರೇಟ್ ರವರು – ಅಧ್ಯಕ್ಷರು, ಪದನಿಮಿತ್ತ;

(ಬಿ) ಉಪ–ವಿಭಾಗೀಯ ಮಧ್ಯವರ್ತಿ ಮಟ್ಟದಲ್ಲಿರುವ ಪಂಚಾಯಿತಿಗಳ ಅಧ್ಯಕ್ಷರುಗಳು ಮತ್ತು ಮುಖ್ಯಕಾರ್ಯನಿರ್ವಹಣಾ ಅಧಿಕಾರಿಗಳು ಮತ್ತು ಮಧ್ಯವರ್ತಿ ಮಟ್ಟದಲ್ಲಿ ಪಂಚಾಯಿತಿಗಳು ಅಸ್ತಿತ್ವದಲ್ಲಿ ಇಲ್ಲದಿದ್ದರೆ ಗ್ರಾಮಮಟ್ಟದ ಎರಡು ಪಂಚಾಯಿತಿಗಳಿಂದ ಉಪವಿಭಾಗೀಯ ಮ್ಯಾಜಿಸ್ಟ್ರೇಟ್‌ರವರು ನಾಮನಿರ್ದೇಶನ ಮಾಡುವ ಅಧ್ಯಕ್ಷರು–ಸದಸ್ಯರು, ಪದನಿಮಿತ್ತ;

(ಸಿ) ಉಪವಿಭಾಗೀಯ ಪೊಲೀಸ್ ಅಧಿಕಾರಿ – ಸದಸ್ಯ, ಪದನಿಮಿತ್ತ;

(ಡಿ) ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಎಂದರೆ,–

(i) ಉಪ–ವಿಭಾಗೀಯ ಕೇಂದ್ರ ಕಾರ್ಯಸ್ಥಳದಲ್ಲಿರುವ ಪುರಸಭೆಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ – ಸದಸ್ಯ, ಪದನಿಮಿತ್ತ; ಮತ್ತು

(ii) ಉಪ–ವಿಭಾಗದಲ್ಲಿ ದಂಡುಪ್ರದೇಶ ಮಂಡಲಿ ಯಾವುದಾದರೂ ಇದ್ದರೆ, ಆ ದಂಡು ಪ್ರದೇಶ ಮಂಡಲಿ – ಸದಸ್ಯ, ಪದನಿಮಿತ್ತ;

(ಇ) ಉಪ–ವಿಭಾಗದಲ್ಲಿ ಇರುವ ರೈಲ್ವೆ ಪ್ರಾಧಿಕಾರವು ನಾಮನಿರ್ದೇಶನ ಮಾಡುವ ಒಬ್ಬ ಪ್ರತಿನಿಧಿ – ಸದಸ್ಯ, ಪದನಿಮಿತ್ತ;

(ಎಫ್) ಉಪ–ವಿಭಾಗದಲ್ಲಿ ಮಲಹೊರುವ ಜಾಡಮಾಲಿ ಕೆಲಸವನ್ನು ನಿಷೇಧಿಸುವ ಮತ್ತು ಮಲಹೊರುವ ಜಾಡಮಾಲಿಗಳಿಗೆ ಪುನರ್ವಸತಿ ಕಲ್ಪಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವ ಸಂಘಟನೆಗಳಿಗೆ ಸೇರಿದ ಅಥವಾ ಉಪ–ವಿಭಾಗದಲ್ಲಿ ವಾಸಿಸುತ್ತಿರುವ ಜಾಡಮಾಲಿ ಸಮುದಾಯವನ್ನು ಪ್ರತಿನಿಧಿಸುವ, ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರಿಂದ ನಾಮನಿರ್ದೇಶಿತರಾದ ಇಬ್ಬರು ಸಾಮಾಜಿಕ ಕಾರ್ಯಕರ್ತರು, ಇವರಲ್ಲಿ ಒಬ್ಬರು ಮಹಿಳೆ ಇರತಕ್ಕದ್ದು;

(ಜಿ) ಉಪ-ವಿಭಾಗದಲ್ಲಿ ಹಣಕಾಸು ಮತ್ತು ಸಾಲನೀಡಿಕೆ ಸಂಸ್ಥೆಗಳನ್ನು ಪ್ರತಿನಿಧಿಸುವ, ಉಪ-ವಿಭಾಗೀಯ ಮ್ಯಾಜಿಸ್ಟ್ರೇಟ್ ಅವರಿಂದ ನಾಮನಿರ್ದೇಶಿತನಾದ ಒಬ್ಬ ವ್ಯಕ್ತಿ;

(ಹೆಚ್) ಉಪ-ವಿಭಾಗ ಮಟ್ಟದ ಅನುಸೂಚಿತ ಜಾತಿಗಳ ಕಲ್ಯಾಣದ ಪ್ರಭಾರಿ ಅಧಿಕಾರಿ
-ಸದಸ್ಯ-ಕಾರ್ಯದರ್ಶಿ, ಪದನಿಮಿತ್ತ;

(ಐ) ಇಲಾಖೆಗಳ ಉಪವಿಭಾಗ ಮಟ್ಟದ ಅಧಿಕಾರಿಗಳು ಮತ್ತು ರಾಜ್ಯ ಸರ್ಕಾರದ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟರ ಯಾವುದೇ ಸಾಮಾನ್ಯ ಆದೇಶಗಳಿಗೆ ಒಳಪಟ್ಟು, ಈ ಅಧಿನಿಯಮದ ಉದ್ದೇಶವನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಯಾವ ಏಜೆನ್ಸಿಗಳು ಮಹತ್ವದ ಪಾತ್ರವನ್ನು ವಹಿಸುತ್ತವೆಂದು ಉಪ-ವಿಭಾಗೀಯ ಮ್ಯಾಜಿಸ್ಟ್ರೇಟರು ಅಭಿಪ್ರಾಯಪಡುವರೋ, ಆ ಏಜೆನ್ಸಿಗಳು - ಸದಸ್ಯ, ಪದನಿಮಿತ್ತ

(4) ಜಿಲ್ಲೆ ಮತ್ತು ಉಪ-ವಿಭಾಗ ಮಟ್ಟದಲ್ಲಿ ರಚಿತವಾದ ಪ್ರತಿಯೊಂದು ಜಾಗೃತ ಸಮಿತಿಯು ಪ್ರತಿ ಮೂರು ತಿಂಗಳಲ್ಲಿ ಕನಿಷ್ಠಪಕ್ಷ ಒಂದು ಬಾರಿಯಾದರೂ ಸಭೆ ಸೇರತಕ್ಕದ್ದು.

(5) ಜಾಗೃತ ಸಮಿತಿಯ ರಚನೆಯಲ್ಲಿ ಕಂಡುಬರುವ ಯಾವುದೇ ನ್ಯೂನ್ಯತೆಯ ಕಾರಣ ಮಾತ್ರದಿಂದಲೇ ಅವುಗಳ ವ್ಯವಹರಣೆಗಳು ಅಸಿಂಧುವಾಗತಕ್ಕದ್ದಲ್ಲ.

**25. ಜಾಗೃತ ಸಮಿತಿಯ ಪ್ರಕಾರ್ಯಗಳು.-**

(ಎ) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಉಪಬಂಧಗಳನ್ನು ಯುಕ್ತವಾಗಿ ಅನುಷ್ಠಾನಗೊಳಿಸಲಾಗುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕೆ ಸಂಬಂಧಿಸಿ ಯಾವ ಕ್ರಮ ತೆಗೆದುಕೊಳ್ಳಬೇಕು ಎಂಬ ಬಗ್ಗೆ ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಅಥವಾ ಸಂದರ್ಭಾನುಸಾರ ಉಪ-ವಿಭಾಗೀಯ ಮ್ಯಾಜಿಸ್ಟ್ರೇಟರಿಗೆ ಸಲಹೆಯನ್ನು ನೀಡುವುದು;

(ಬಿ) ಮಲಹೊರುವ ಜಾಡಮಾಲಿಗಳ ಆರ್ಥಿಕ ಮತ್ತು ಸಾಮಾಜಿಕ ಪುನರ್ವಸತಿಯ ಬಗ್ಗೆ ಮೇಲ್ವಿಚಾರಣೆಯನ್ನು ಮಾಡುವುದು;

(ಸಿ) ಮಲಹೊರುವ ಜಾಡಮಾಲಿಗಳ ಪುನರ್ವಸತಿಗಾಗಿ ಸಾಕಷ್ಟು ಸಾಲ ದೊರೆಯುವಂತಾಗುವ ದೃಷ್ಟಿಯಿಂದ ಸಂಬಂಧಪಟ್ಟ ಎಲ್ಲಾ ಏಜೆನ್ಸಿಗಳ ಪ್ರಕಾರ್ಯಗಳನ್ನು ಸಮನ್ವಯಗೊಳಿಸುವುದು;

(ಡಿ) ಈ ಅಧಿನಿಯಮದ ಮೇರೆಗಿನ ಅಪರಾಧಗಳ ನೋಂದಣಿಯನ್ನು ಮತ್ತು ಅವುಗಳ ವಿಚಾರಣೆ ನಡೆಸುವುದನ್ನು ಹಾಗೂ ಆ ಬಗ್ಗೆ ಪ್ರಾಸಿಕ್ಯೂಷನು ಕ್ರಮ ಜರುಗಿಸುವುದನ್ನು ಮೇಲ್ವಿಚಾರಣೆ ಮಾಡುವುದು

- ಜಾಗೃತ ಸಮಿತಿಯ ಪ್ರಕಾರ್ಯಗಳಾಗಿರತಕ್ಕದ್ದು.

**26. ರಾಜ್ಯ ಮೇಲ್ವಿಚಾರಣಾ ಸಮಿತಿ.**-(1) ಪ್ರತಿಯೊಂದು ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡ ಒಂದು ರಾಜ್ಯ ಮೇಲ್ವಿಚಾರಣಾ ಸಮಿತಿಯನ್ನು ರಚಿಸತಕ್ಕದ್ದು, ಎಂದರೆ:-

(ಎ) ರಾಜ್ಯದ ಮುಖ್ಯಮಂತ್ರಿ ಅಥವಾ ಅವರಿಂದ ನಾಮನಿರ್ದೇಶನಗೊಂಡ ಮಂತ್ರಿ

- ಅಧ್ಯಕ್ಷ, ಪದನಿಮಿತ್ತ;

(ಬಿ) ಅನುಸೂಚಿತ ಜಾತಿಗಳ ಕಲ್ಯಾಣಮಂತ್ರಿ ಮತ್ತು ಅಂಥ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂಥ ಇತರ ಇಲಾಖೆಯ ಪ್ರಭಾರಿ ಮಂತ್ರಿ

(ಸಿ) ಸಫಾಯಿ ಕರ್ಮಚಾರಿಗಳ ಮತ್ತು ಅನುಸೂಚಿತ ಜಾತಿಗಳ ರಾಜ್ಯ ಆಯೋಗಗಳು ಯಾವುದಾದರೂ ಇದ್ದರೆ, ಅವುಗಳ ಅಧ್ಯಕ್ಷರು - ಸದಸ್ಯ, ಪದನಿಮಿತ್ತ;

(ಡಿ) ಅನುಸೂಚಿತ ಜಾತಿಗಳ ಮತ್ತು ಸಫಾಯಿ ಕರ್ಮಚಾರಿಗಳ ರಾಷ್ಟ್ರೀಯ ಆಯೋಗಗಳ ಪ್ರತಿನಿಧಿಗಳು - ಸದಸ್ಯ, ಪದನಿಮಿತ್ತ;

(ಇ) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಅನುಸೂಚಿತ ಜಾತಿಗಳಿಗೆ ಸೇರಿರುವ ರಾಜ್ಯ ವಿಧಾನ ಮಂಡಲದ ಇಬ್ಬರು ಸದಸ್ಯರುಗಳಿಗಿಂತಲೂ ಕಡಿಮೆಯಿಲ್ಲದ ಸದಸ್ಯರು:

ಪರಂತು, ರಾಜ್ಯ ವಿಧಾನಮಂಡಲದಲ್ಲಿ ಅನುಸೂಚಿತ ಜಾತಿಗಳಿಗೆ ಸೇರಿದ ಸದಸ್ಯರಿಲ್ಲದಿದ್ದ ಪಕ್ಷದಲ್ಲಿ, ರಾಜ್ಯ ಸರ್ಕಾರವು ಅನುಸೂಚಿತ ಪಂಗಡಗಳಿಗೆ ಸೇರಿದ ಸದಸ್ಯರನ್ನು ನಾಮನಿರ್ದೇಶನ ಮಾಡಬಹುದು;

(ಎಫ್) ಪೊಲೀಸ್ ಮಹಾನಿರ್ದೇಶಕರು - ಸದಸ್ಯ, ಪದನಿಮಿತ್ತ;

(ಜಿ) ಗೃಹ, ಪಂಚಾಯತ್ ರಾಜ್, ನಗರ ಸ್ಥಳೀಯ ಸಂಸ್ಥೆಗಳ ಮತ್ತು ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂಥ ಇತರ ಇಲಾಖೆಗಳಲ್ಲಿನ ಸರ್ಕಾರದ ಕಾರ್ಯದರ್ಶಿಗಳು;

(ಹೆಚ್) ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂತೆ ಜಿಲ್ಲಾ ಮಟ್ಟದಲ್ಲಿನ ಕಡೇ ಪಕ್ಷ ಒಂದು ನಗರ ಪಾಲಿಕೆಯ, ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ದಂಡುಪ್ರದೇಶದ ಮಂಡಳಿ ಮತ್ತು ರೈಲ್ವೆ ಪ್ರಾಧಿಕಾರ;

(ಐ) ರಾಜ್ಯದಲ್ಲಿ ಮಲಹೊರುವ ಜಾಡಮಾಲಿ ಕೆಲಸವನ್ನು ನಿಷೇಧಿಸುವುದಕ್ಕಾಗಿ ಮತ್ತು ಮಲಹೊರುವ ಜಾಡಮಾಲಿಗಾಗಿ ಪುನರ್ವಸತಿ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವ ಸಂಘಸಂಸ್ಥೆಗೆ ಸೇರಿದ ಅಥವಾ ಜಾಡಮಾಲಿಯ ಸಮುದಾಯವನ್ನು ಪ್ರತಿನಿಧಿಸುತ್ತಿರುವ, ಆ ರಾಜ್ಯದ ನಿವಾಸಿಯಾಗಿರುವ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರಾದ ನಾಲ್ಕು ಮಂದಿಯನ್ನು ಮೀರದಂಥ ಸಾಮಾಜಿಕ ಕಾರ್ಯಕರ್ತರು, ಅವರಲ್ಲಿ ಇಬ್ಬರು ಮಹಿಳೆಯರು ಇರತಕ್ಕದ್ದು.

(ಜೆ) ರಾಜ್ಯಮಟ್ಟದ ಬ್ಯಾಂಕರ್‌ಗಳ ಸಮಿತಿಯ ಸಂಚಾಲಕ ಬ್ಯಾಂಕ್‌ನ ರಾಜ್ಯ-ಮಟ್ಟದ ಮುಖ್ಯಸ್ಥ – ಸದಸ್ಯ, ಪದನಿಮಿತ್ತ;

(ಕೆ) ಅನುಸೂಚಿತ ಜಾತಿಗಳ ಅಭಿವೃದ್ಧಿಯ ಬಗ್ಗೆ ವ್ಯವಹರಿಸುವ ರಾಜ್ಯ ಸರ್ಕಾರದ ಇಲಾಖೆಯ ಕಾರ್ಯದರ್ಶಿ – ಸದಸ್ಯ ಕಾರ್ಯದರ್ಶಿ, ಪದನಿಮಿತ್ತ;

(ಎಲ್) ಈ ಅಧಿನಿಯಮವನ್ನು ಅನುಷ್ಠಾನಗೊಳಿಸುವುದಕ್ಕೆ ಯಾವ ಇಲಾಖೆಗಳು ಅಥವಾ ಏಜೆನ್ಸಿಗಳು ಆಸಕ್ತಿ ಉಳ್ಳವುಗಳೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಡುವುದೋ, ಆ ರಾಜ್ಯ ಸರ್ಕಾರದ ಅಂಥ ಇಲಾಖೆಗಳ ಮತ್ತು ಅಂಥ ಇತರ ಏಜೆನ್ಸಿಗಳ ಪ್ರತಿನಿಧಿಗಳು.

(2) ರಾಜ್ಯ ಮೇಲ್ವಿಚಾರಣಾ ಸಮಿತಿಯು, ಪ್ರತಿ ಆರು ತಿಂಗಳುಗಳಲ್ಲಿ ಕನಿಷ್ಠಪಕ್ಷ ಒಂದು ಬಾರಿಯಾದರೂ ಸಭೆ ಸೇರತಕ್ಕದ್ದು ಮತ್ತು ಅದರ ಸಭೆಗಳಲ್ಲಿ ಕಾರ್ಯಕಲಾಪಗಳ ನಿರ್ವಹಣೆಗೆ ಸಂಬಂಧಿಸಿದಂತೆ ನಿಯಮಿಸಬಹುದಾದ ಕಾರ್ಯವಿಧಾನದ ನಿಯಮಗಳನ್ನು ಪಾಲಿಸತಕ್ಕದ್ದು.

**27. ರಾಜ್ಯ ಮೇಲ್ವಿಚಾರಣಾ ಸಮಿತಿಯ ಪ್ರಕಾರ್ಯಗಳು.**–ಈ ಮುಂದಿನವುಗಳು ರಾಜ್ಯ ಮೇಲ್ವಿಚಾರಣಾ ಸಮಿತಿಯ ಪ್ರಕಾರ್ಯಗಳಾಗಿರತಕ್ಕದ್ದು, ಎಂದರೆ–

(ಎ) ಈ ಅಧಿನಿಯಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದಕ್ಕಾಗಿ ರಾಜ್ಯ ಸರ್ಕಾರವು ಮತ್ತು ಸ್ಥಳೀಯ ಪ್ರಾಧಿಕಾರಗಳು ಮಾಡುವ ಕೆಲಸಗಳ ಬಗ್ಗೆ ಮೇಲ್ವಿಚಾರಣೆ ಮಾಡುವುದು ಮತ್ತು ಸಲಹೆ ನೀಡುವುದು;

(ಬಿ) ಸಂಬಂಧಪಟ್ಟ ಎಲ್ಲಾ ಏಜೆನ್ಸಿಗಳ ಪ್ರಕಾರ್ಯಗಳನ್ನು ಸಮನ್ವಯಗೊಳಿಸುವುದು;

(ಸಿ) ಈ ಅಧಿನಿಯಮವನ್ನು ಅನುಷ್ಠಾನಗೊಳಿಸುವುದಕ್ಕಾಗಿ ಅದಕ್ಕೆ ಪ್ರಾಸಂಗಿಕವಾದ ಅಥವಾ ಅದಕ್ಕೆ ಸಂಬಂಧಪಟ್ಟ ಇತರ ಯಾವುದೇ ವಿಷಯವನ್ನು ನೋಡಿಕೊಳ್ಳುವುದು

**28. ರಾಜ್ಯಗಳು ಅಥವಾ ಕೇಂದ್ರಾಡಳಿತ ಪ್ರದೇಶಗಳು ನಿಯತಕಾಲಿಕ ವರದಿಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸುವುದು.**– ಪ್ರತಿಯೊಂದು ರಾಜ್ಯವು ಅಥವಾ ಕೇಂದ್ರಾಡಳಿತ ಪ್ರದೇಶದ ಸರ್ಕಾರವು ಮತ್ತು ಕೇಂದ್ರಾಡಳಿತ ಪ್ರದೇಶದ ಆಡಳಿತವು, ಕೇಂದ್ರ ಸರ್ಕಾರವು ಅಗತ್ಯಪಡಿಸಬಹುದಾದಂತೆ ಈ ಅಧಿನಿಯಮದ ಅನುಷ್ಠಾನದ ಪ್ರಗತಿಯ ಬಗ್ಗೆ ಅಂಥ ನಿಯತಕಾಲಿಕ ವರದಿಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

**29. ಕೇಂದ್ರೀಯ ಮೇಲ್ವಿಚಾರಣಾ ಸಮಿತಿ.**–(1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಒಂದು ಕೇಂದ್ರೀಯ ಮೇಲ್ವಿಚಾರಣಾ ಸಮಿತಿಯನ್ನು ರಚಿಸತಕ್ಕದ್ದು.

(2) ಕೇಂದ್ರೀಯ ಮೇಲ್ವಿಚಾರಣಾ ಸಮಿತಿಯು, ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ :–

(ಎ) ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯ ಕೇಂದ್ರ ಮಂತ್ರಿ– ಅಧ್ಯಕ್ಷ, ಪದನಿಮಿತ್ತ;

(ಬಿ) ಅನುಸೂಚಿತ ಜಾತಿಗಳ ರಾಷ್ಟ್ರೀಯ ಆಯೋಗದ ಅಧ್ಯಕ್ಷ–ಸದಸ್ಯ, ಪದನಿಮಿತ್ತ;

(ಸಿ) ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯದ ರಾಜ್ಯ ಮಂತ್ರಿ –ಸದಸ್ಯ, ಪದನಿಮಿತ್ತ;

(ಡಿ) ಅಧ್ಯಕ್ಷರು, ಸಫಾಯಿ ಕರ್ಮಚಾರಿಗಳ ರಾಷ್ಟ್ರೀಯ ಆಯೋಗ–ಸದಸ್ಯ, ಪದನಿಮಿತ್ತ;

(ಇ) ಅನುಸೂಚಿತ ಜಾತಿಗಳ ಅಭಿವೃದ್ಧಿಯ ಬಗ್ಗೆ ವ್ಯವಹರಿಸುವ ಯೋಜನಾಆಯೋಗದ ಸದಸ್ಯ–ಸದಸ್ಯ, ಪದನಿಮಿತ್ತ;

(ಎಫ್) ಅನುಸೂಚಿತ ಜಾತಿಗಳಿಗೆ ಸೇರಿದ ಸಂಸತ್‌ನ ಮೂರು ಮಂದಿ ಚುನಾಯಿತ ಸದಸ್ಯರು; ಅವರಲ್ಲಿ ಲೋಕಸಭೆಯಿಂದ ಇಬ್ಬರು ಮತ್ತು ರಾಜ್ಯಸಭೆಯಿಂದ ಒಬ್ಬರು;

(ಜಿ) ಈ ಕೆಳಕಂಡ ಮಂತ್ರಾಲಯಗಳ ಕಾರ್ಯದರ್ಶಿಗಳು,–

(i) ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ;

(ii) ನಗರಾಭಿವೃದ್ಧಿ;

(iii) ವಸತಿ ಮತ್ತು ನಗರ ಬಡತನ ನಿರ್ಮೂಲನೆ;

(iv) ಕುಡಿಯುವ ನೀರು ಮತ್ತು ನೈರ್ಮಲ್ಯ;

(v) ಪಂಚಾಯತ್ ರಾಜ್;

(vi) ಹಣಕಾಸು, ಹಣಕಾಸು ಸೇವೆಗಳ ಇಲಾಖೆ; ಮತ್ತು

(vii) ರಕ್ಷಣೆ

ಸದಸ್ಯರು, ಪದನಿಮಿತ್ತ;

(ಹೆಚ್) ಅಧ್ಯಕ್ಷರು, ರೈಲ್ವೇ ಮಂಡಳಿ –ಸದಸ್ಯ, ಪದನಿಮಿತ್ತ;

(ಐ) ಮಹಾನಿರ್ದೇಶಕರು, ರಕ್ಷಣಾ ಇಲಾಖೆಯ ಆಸ್ತಿಪಾಸ್ತಿಗಳು –ಸದಸ್ಯ, ಪದನಿಮಿತ್ತ;

(ಜೆ) ಕೇಂದ್ರ ಸರ್ಕಾರವು ಅಧಿಸೂಚಿಸಬಹುದಾದಂತೆ, ರಾಜ್ಯ ಸರ್ಕಾರಗಳಿಂದ ಆರು ಮಂದಿಗಿಂತ ಕಡಿಮೆಯಿಲ್ಲದ ಪ್ರತಿನಿಧಿಗಳು ಮತ್ತು ಕೇಂದ್ರಾಡಳಿತ ಪ್ರದೇಶದಿಂದ ಒಬ್ಬ ಪ್ರತಿನಿಧಿ;

(ಕೆ) ದೇಶದಲ್ಲಿ ಮಲಹೊರುವ ಜಾಡಮಾಲಿ ಕೆಲಸವನ್ನು ನಿಷೇಧಿಸುವುದಕ್ಕಾಗಿ ಮತ್ತು ಮಲಹೊರುವ ಜಾಡಮಾಲಿಗಳ ಪುನರ್ವಸತಿಗಾಗಿ ಕೆಲಸ ಮಾಡುತ್ತಿರುವ ಸಂಘಟನೆಗಳಿಗೆ ಸೇರಿದ ಅಥವಾ ಜಾಡಮಾಲಿಯ ಸಮುದಾಯವನ್ನು ಪ್ರತಿನಿಧಿಸುವ, ದೇಶದ ನಿವಾಸಿಗಳಾಗಿರುವ, ಅಧ್ಯಕ್ಷರಿಂದ ನಾಮನಿರ್ದೇಶಿತರಾದ ಆರು ಮಂದಿಗಿಂತ ಕಡಿಮೆಯಿಲ್ಲದ ಸಾಮಾಜಿಕ ಕಾರ್ಯಕರ್ತರು, ಅವರಲ್ಲಿ ಇಬ್ಬರು ಮಹಿಳೆಯರು ಆಗಿರತಕ್ಕದ್ದು.

(ಎಲ್) ಅನುಸೂಚಿತ ಜಾತಿಗಳ ಅಭಿವೃದ್ಧಿ ವಿಷಯವನ್ನು ನೋಡಿಕೊಳ್ಳುವ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯದ ಅಧೀನದಲ್ಲಿ ಬರುವ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯ ಜಂಟಿಕಾರ್ಯದರ್ಶಿ – ಸದಸ್ಯ–ಕಾರ್ಯದರ್ಶಿ, ಪದನಿಮಿತ್ತ;

(ಎಂ) ಈ ಅಧಿನಿಯಮವನ್ನು ಅನುಷ್ಠಾನಗೊಳಿಸುವುದಕ್ಕೆ ಯಾವ ಕೇಂದ್ರೀಯ ಮಂತ್ರಾಲಯಗಳು ಅಥವಾ ಇಲಾಖೆಗಳು ಮತ್ತು ಏಜೆನ್ಸಿಗಳ ಪ್ರತಿನಿಧಿಗಳು ಆಸಕ್ತಿ ಉಳ್ಳವರೆಂದು ಅಧ್ಯಕ್ಷರು ಅಭಿಪ್ರಾಯಪಡುವರೋ ಆ ಕೇಂದ್ರೀಯ ಮಂತ್ರಾಲಯದ ಅಥವಾ ಇಲಾಖೆಗಳ ಮತ್ತು ಏಜೆನ್ಸಿಗಳ ಇತರ ಪ್ರತಿನಿಧಿಗಳನ್ನು.

(3) ಕೇಂದ್ರ ಮೇಲ್ವಿಚಾರಣಾ ಸಮಿತಿಯು ಪ್ರತಿ ಆರು ತಿಂಗಳಿಗೆ ಕನಿಷ್ಠಪಕ್ಷ ಒಂದು ಬಾರಿಯಾದರೂ ಸಭೆಯನ್ನು ಸೇರತಕ್ಕದ್ದು.

**30. ಕೇಂದ್ರೀಯ ಮೇಲ್ವಿಚಾರಣಾ ಸಮಿತಿಯ ಪ್ರಕಾರ್ಯಗಳು.–**

(ಎ) ಈ ಅಧಿನಿಯಮವನ್ನು ಮತ್ತು ಸಂಬಂಧಿಸಿದ ಕಾನೂನುಗಳನ್ನು ಹಾಗೂ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದಕ್ಕಾಗಿ ಕೇಂದ್ರ ಸರ್ಕಾರವು ಮತ್ತು ರಾಜ್ಯ ಸರ್ಕಾರಗಳು ಕೈಗೊಳ್ಳುವ ಕಾರ್ಯಗಳ ಮೇಲೆ ಮೇಲ್ವಿಚಾರಣೆ ಮಾಡುವುದು ಮತ್ತು ಸಲಹೆಗಳನ್ನು ನೀಡುವುದು;

(ಬಿ) ಸಂಬಂಧಪಟ್ಟ ಎಲ್ಲಾ ಏಜೆನ್ಸಿಗಳ ಪ್ರಕಾರ್ಯಗಳನ್ನು ಸಮನ್ವಯಗೊಳಿಸುವುದು;

(ಸಿ) ಈ ಅಧಿನಿಯಮದ ಅನುಷ್ಠಾನಕ್ಕೆ ಪ್ರಾಸಂಗಿಕವಾದ ಅಥವಾ ಅದಕ್ಕೆ ಸಂಬಂಧಪಟ್ಟ ಇತರ ಯಾವುದೇ ವಿಷಯವನ್ನು ನೋಡಿಕೊಳ್ಳುವುದು

– ಕೇಂದ್ರ ಮೇಲ್ವಿಚಾರಣಾ ಸಮಿತಿಯ ಪ್ರಕಾರ್ಯಗಳಾಗಿರತಕ್ಕದ್ದು.

**31. ಸಫಾಯಿ ಕರ್ಮಚಾರಿಗಳ ರಾಷ್ಟ್ರೀಯ ಆಯೋಗದ ಪ್ರಕಾರ್ಯಗಳು.–** (1) ಸಫಾಯಿ ಕರ್ಮಚಾರಿಗಳ ರಾಷ್ಟ್ರೀಯ ಆಯೋಗವು ಈ ಕೆಳಕಂಡ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ:–

(ಎ) ಈ ಅಧಿನಿಯಮದ ಅನುಷ್ಠಾನದ ಮೇಲ್ವಿಚಾರಣೆ ಮಾಡುವುದು;

(ಬಿ) ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘನೆ ಮಾಡಿರುವುದಕ್ಕೆ ಸಂಬಂಧಪಟ್ಟ ದೂರುಗಳನ್ನು ವಿಚಾರಣೆ ಮಾಡುವುದು ಮತ್ತು ಮುಂದಿನ ಕ್ರಮಗಳನ್ನು ತೆಗೆದುಕೊಳ್ಳುವಂತೆ ಶಿಫಾರಸ್ಸುಗಳ ಸಹಿತ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಅದರ ನಿರ್ಣಯಗಳನ್ನು ತಿಳಿಸುವುದು; ಮತ್ತು

(ಸಿ) ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸಲಹೆಗಳನ್ನು ನೀಡುವುದು;

(ಡಿ) ಈ ಅಧಿನಿಯಮದ ಅನುಷ್ಠಾನವಾಗದಿರುವ ವಿಷಯಗಳಿಗೆ ಸಂಬಂಧಿಸಿದಂತೆ ಅದು ಸ್ವಯಂ ಪ್ರೇರಣೆಯಿಂದ ತಾನಾಗಿಯೇ ನೋಟೀಸ್‌ನ್ನು ನೀಡುವುದು.

(2) ರಾಷ್ಟ್ರೀಯ ಆಯೋಗವು (1)ನೇ ಉಪಪ್ರಕರಣದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕೆ ಸಂಬಂಧಪಟ್ಟಂತೆ ಆ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಿಷಯಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಯಾವುದೇ ಸರ್ಕಾರದಿಂದ ಅಥವಾ ಸ್ಥಳೀಯ ಅಥವಾ ಇತರ ಪ್ರಾಧಿಕಾರದಿಂದ ತರಿಸಿಕೊಳ್ಳುವುದಕ್ಕೆ ಅಧಿಕಾರವನ್ನು ಹೊಂದಿರತಕ್ಕದ್ದು.

**32. ಈ ಅಧಿನಿಯಮದ ಅನುಷ್ಠಾನದ ಬಗ್ಗೆ ಮೇಲ್ವಿಚಾರಣೆ ಮಾಡಲು ಸಮುಚಿತ ಪ್ರಾಧಿಕಾರವನ್ನು ನೇಮಕ ಮಾಡಲು ರಾಜ್ಯ ಸರ್ಕಾರದ ಅಧಿಕಾರ.–**(1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, 31ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಪ್ರಕಾರ್ಯಗಳನ್ನು, ಯಥೋಚಿತ ಬದಲಾವಣೆಗಳೊಂದಿಗೆ ನಿರ್ವಹಿಸಲು, ಸೂಕ್ತವೆಂದು ತಾನು ಭಾವಿಸಿದಂತೆ, ರಾಜ್ಯದಲ್ಲಿ ಸಫಾಯಿ ಕರ್ಮಚಾರಿಗಳ ರಾಜ್ಯ ಆಯೋಗವನ್ನು ಅಥವಾ ಅನುಸೂಚಿತ ಜಾತಿಗಳ ರಾಜ್ಯ ಆಯೋಗವನ್ನು ಅಥವಾ ಅಂಥ ಇತರ ಶಾಸನಬದ್ಧ ಅಥವಾ ಇತರ ಪ್ರಾಧಿಕಾರವನ್ನು ಗೊತ್ತುಪಡಿಸಬಹುದು.

(2) ಉಪಪ್ರಕರಣ(1)ರ ಮೇರೆಗೆ ಗೊತ್ತುಪಡಿಸಿದ ಪ್ರಾಧಿಕಾರವು, 31ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ ಅದು, ರಾಜ್ಯದಲ್ಲಿ ಸಫಾಯಿ ಕರ್ಮಚಾರಿಗಳ ರಾಷ್ಟ್ರೀಯ ಆಯೋಗದ ಅಧಿಕಾರಗಳನ್ನು ಯಥೋಚಿತ ಬದಲಾವಣೆಗಳೊಂದಿಗೆ ಹೊಂದಿರತಕ್ಕದ್ದು.

## ಅಧ್ಯಾಯ–VIII

### ಸಂಕೀರ್ಣ

33. **ಒಳಚರಂಡಿಗಳು ಮೊದಲಾದವುಗಳನ್ನು ಸ್ವಚ್ಛಗೊಳಿಸಲು ಆಧುನಿಕ ತಂತ್ರಜ್ಞಾನ ಬಳಕೆ ಮಾಡುವುದಕ್ಕೆ ಸ್ಥಳೀಯ ಪ್ರಾಧಿಕಾರಗಳ ಮತ್ತು ಇತರ ಏಜೆನ್ಸಿಗಳ ಕರ್ತವ್ಯ.–** (1) ಪ್ರತಿಯೊಂದು ಸ್ಥಳೀಯ ಪ್ರಾಧಿಕಾರವು ಮತ್ತು ಇತರ ಏಜೆನ್ಸಿಯು ತನ್ನ ನಿಯಂತ್ರಣ ವ್ಯಾಪ್ತಿಯೊಳಗೆ ಬರುವ ಪ್ರದೇಶದಲ್ಲಿನ ಒಳಚರಂಡಿ ವ್ಯವಸ್ಥೆಗಳನ್ನು, ರೊಚ್ಚುತೊಟ್ಟಿಗಳನ್ನು ಮತ್ತು ಇತರ ಸ್ಥಳಗಳನ್ನು ಸ್ವಚ್ಛಗೊಳಿಸುವುದಕ್ಕಾಗಿ ಮತ್ತು ಜಾಡಮಾಲಿಗಳು ಮಲಮೂತ್ರಗಳನ್ನು ಕೈಗಳಿಂದ ಸಾಗಿಸುವಂಥ ಸ್ವಚ್ಛಗೊಳಿಸುವ ವಿಧಾನವನ್ನು ಸಂಪೂರ್ಣವಾಗಿ ಕೈ ಬಿಟ್ಟುಬಿಡುವ ಅಗತ್ಯವಿರುವ ದೃಷ್ಟಿಯಿಂದ, ಸೂಕ್ತ ತಂತ್ರಜ್ಞಾನವುಳ್ಳ ಯಂತ್ರೋಪಕರಣಗಳನ್ನು ಬಳಕೆ ಮಾಡುವುದು ಅವುಗಳ ಕರ್ತವ್ಯವಾಗಿರತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ನಮೂದಿಸಿದಂತೆ ಆಧುನಿಕ ತಂತ್ರಜ್ಞಾನ ಬಳಕೆ ಮಾಡುವುದಕ್ಕೆ ಹಣಕಾಸಿನ ನೆರವು, ಪ್ರೋತ್ಸಾಹಧನ ಮತ್ತು ಇತರ ರೀತಿಯ ನೆರವು ನೀಡುವ ಮುಖಾಂತರ ಉತ್ತೇಜಿಸುವುದು ಸಮುಚಿತ ಸರ್ಕಾರದ ಕರ್ತವ್ಯವಾಗಿರತಕ್ಕದ್ದು.

34. **ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–**ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ಸಮುಚಿತ ಸರ್ಕಾರ ಅಥವಾ ಸಮುಚಿತ ಸರ್ಕಾರದ ಯಾರೇ ಅಧಿಕಾರಿಯ ಅಥವಾ ಸಮಿತಿಯ ಯಾರೇ ಸದಸ್ಯನ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

35. **ಸಿವಿಲ್ ನ್ಯಾಯಾಲಯಗಳ ಅಧಿಕಾರವ್ಯಾಪ್ತಿಯ ಪ್ರತಿಷೇಧ.–** ಯಾವುದೇ ಸಿವಿಲ್ ನ್ಯಾಯಾಲಯವು ಈ ಅಧಿನಿಯಮಕ್ಕೆ ಅನ್ವಯಿಸುವ ಯಾವುದೇ ಉಪಬಂಧದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ ಮತ್ತು ಯಾವುದೇ ಸಿವಿಲ್ ನ್ಯಾಯಾಲಯವು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಆ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ನಿರ್ಬಂಧಕ ಆಜ್ಞೆಯನ್ನು ನೀಡತಕ್ಕದ್ದಲ್ಲ.

36. **ನಿಯಮಗಳನ್ನು ರಚಿಸಲು ಸಮುಚಿತ ಸರ್ಕಾರದ ಅಧಿಕಾರ.–**(1) ಸಮುಚಿತ ಸರ್ಕಾರವು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಮೂರು ತಿಂಗಳು ಮೀರದ ಅವಧಿಯೊಳಗಾಗಿ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸತಕ್ಕದ್ದು.

(2) ವಿಶೇಷವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳಲ್ಲಿ ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಗಳಿಗಾಗಿ, ಎಂದರೆ:–

(ಎ) 2ನೇ ಪ್ರಕರಣದ (1)ನೇ ಉಪಪ್ರಕರಣದ (ಡಿ) ಖಂಡದ ಮೇರೆಗೆ ನಿಯೋಜಕನ ಬಾಧ್ಯತೆಯ ಬಗ್ಗೆ;

(ಬಿ) 2ನೇ ಪ್ರಕರಣದ (1)ನೇ ಉಪಪ್ರಕರಣದ (ಇ) ಮತ್ತು (ಜಿ) ಖಂಡಗಳ ಮೇರೆಗೆ, ಯಾವ ರೀತಿಯಲ್ಲಿ ಮಲಮೂತ್ರಗಳು ಸಂಪೂರ್ಣವಾಗಿ ಕೊಳೆತು ಹೋಗುತ್ತವೆಯೋ ಆ ರೀತಿಯ ಬಗ್ಗೆ;

(ಸಿ) 4ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ, ಯಾವ ರೀತಿಯಲ್ಲಿ ಶುಚಿಯಾಗಿಲ್ಲದ ಶೌಚಾಲಯವನ್ನು ಸಮೀಕ್ಷೆ ಮಾಡಬೇಕೋ ಮತ್ತು ಅದರ ಪಟ್ಟಿಯನ್ನು ಪ್ರಕಟಿಸಬೇಕೋ ಆರೀತಿಯ ಬಗ್ಗೆ;

(ಡಿ) 5ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ, ಶುಚಿಯಾಗಿಲ್ಲದ ಶೌಚಾಲಯಗಳನ್ನು ನೆಲಸಮಗೊಳಿಸುವುದಕ್ಕೆ ನೀಡುವ ನೋಟೀಸ್ ಅನ್ನು ಕೊಡುವ ಕಾರ್ಯವಿಧಾನದ ಮತ್ತು ಅದನ್ನು ನೆಲಸಮಗೊಳಿಸಿದ ವೆಚ್ಚವನ್ನು ವಸೂಲಿ ಮಾಡುವ ಬಗ್ಗೆ;

(ಇ) 11ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ, ಸಮೀಕ್ಷೆಯ ವಿಷಯ ಮತ್ತು ಅದರ ವಿಧಿವಿಧಾನದ ಬಗ್ಗೆ;

(ಎಫ್) 11ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ, ಮಲಹೊರುವ ಜಾಡಮಾಲಿಗಳನ್ನು ಗುರುತಿಸುವುದಕ್ಕಾಗಿ ಅರ್ಹತಾ ಷರತ್ತುಗಳ ಮತ್ತು ಮಲಹೊರುವ ಜಾಡಮಾಲಿಗಳಾಗಿ ಕೆಲಸ ಮಾಡುತ್ತಿರುವುದಾಗಿ ಕಂಡು ಬಂದ ವ್ಯಕ್ತಿಗಳ ತಾತ್ಕಾಲಿಕ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ;

(ಜಿ) 11ನೇ ಪ್ರಕರಣದ (6)ನೇ ಉಪಪ್ರಕರಣದ ಮೇರೆಗೆ, ಮಲಹೊರುವ ಜಾಡಮಾಲಿಗಳಾಗಿ ಕೆಲಸ ಮಾಡುತ್ತಿರುವುದಾಗಿ ಕಂಡು ಬಂದ ವ್ಯಕ್ತಿಗಳ ಅಂತಿಮ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ;

(ಹೆಚ್) 12ನೇ ಪ್ರಕರಣದ (1)ನೇ ಉಪಪ್ರಕರಣದ ಅಥವಾ ಸಂದರ್ಭಾನುಸಾರ 15ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ, ಪುರಸಭೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ಅಥವಾ ಈ ಬಗ್ಗೆ ಆತನು ಅಧಿಕೃತಗೊಳಿಸಿದ ಅಧಿಕಾರಿಗೆ ಅರ್ಜಿಯನ್ನು ಸಲ್ಲಿಸುವ ವಿಧಾನದ ಬಗ್ಗೆ;

(ಐ) 13ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದ (ii)ನೇ ಉಪಖಂಡದ ಮೇರೆಗೆ ಆರಂಭದಲ್ಲಿ ಒಂದುಬಾರಿ ನಗದು ಸಹಾಯವನ್ನು ಕಲ್ಪಿಸುವ ಬಗ್ಗೆ;

(ಜೆ) 20ನೇ ಪ್ರಕರಣದ (2)ನೇ ಉಪಪ್ರಕರಣದ (ಇ) ಖಂಡದ ಮೇರೆಗೆ ಆ ಬಗ್ಗೆ ಇನ್ಸ್‌ಪೆಕ್ಟರ್‌ಗಳ ಇತರ ಅಧಿಕಾರಗಳ ಬಗ್ಗೆ; ಮತ್ತು

(ಕೆ) ನಿಯಮಿಸಬೇಕಾದ ಅಥವಾ ನಿಯಮಿಸುವುದು ಅಗತ್ಯವೆಂದು ಕಂಡುಬರಬಹುದಾದ ಯಾವುದೇ ಇತರ ವಿಷಯದ ಬಗ್ಗೆ

– ಉಪಬಂಧವನ್ನು ಕಲ್ಪಿಸಬಹುದು.

(3) ಕೇಂದ್ರ ಸರ್ಕಾರವು ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ, ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಹಾಗೆ ಇರಿಸಿದ ಅಧಿವೇಶನವು ಅಥವಾ ಅದರ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಸಂದರ್ಭಾನುಸಾರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

(4) ರಾಜ್ಯ ಸರ್ಕಾರವು, ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲವು ಎರಡು ಸದನಗಳನ್ನು ಒಳಗೊಂಡಿರುವಲ್ಲಿ, ಅದರ ಪ್ರತಿಯೊಂದು ಸದನದ ಮುಂದೆ ಅಥವಾ ರಾಜ್ಯ ವಿಧಾನಮಂಡಲವು ಒಂದೇ ಸದನವನ್ನು ಒಳಗೊಂಡಿರುವಲ್ಲಿ, ಆ ಸದನದ ಮುಂದೆ ಮಂಡಿಸತಕ್ಕದ್ದು.

**37. ಮಾದರಿ ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ.**–(1) ಈ ಅಧಿನಿಯಮದ 36ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ:–

(ಎ) ಕೇಂದ್ರ ಸರ್ಕಾರವು, ರಾಜ್ಯ ಸರ್ಕಾರಗಳ ಮಾರ್ಗದರ್ಶನಕ್ಕಾಗಿ ಮತ್ತು ಅವುಗಳ ಬಳಕೆಗಾಗಿ ಮಾದರಿ ನಿಯಮಗಳನ್ನು ಅಧಿಸೂಚನೆಯ ಮೂಲಕ ಪ್ರಕಟಿಸತಕ್ಕದ್ದು; ಮತ್ತು

(ಬಿ) ರಾಜ್ಯ ಸರ್ಕಾರವು, ಈ ಅಧಿನಿಯಮದ 36ನೇ ಪ್ರಕರಣದ ಮೇರೆಗೆ ಅದರಲ್ಲಿ ನಿರ್ದಿಷ್ಟಪಡಿಸಿದ ಮೂರು ತಿಂಗಳ ಅವಧಿಯೊಳಗಾಗಿ, ನಿಯಮಗಳನ್ನು ರಚಿಸಿ ಅಧಿಸೂಚಿಸುವುದಕ್ಕೆ ವಿಫಲವಾದ ಸಂದರ್ಭದಲ್ಲಿ, ಆಗ ಕೇಂದ್ರ ಸರ್ಕಾರವು ಅಧಿಸೂಚಿಸಿದ ಮಾದರಿ ನಿಯಮಗಳು, ರಾಜ್ಯ ಸರ್ಕಾರವು ತನ್ನ ನಿಯಮಗಳನ್ನು ಅಧಿಸೂಚಿಸುವಂಥ ಕಾಲದವರೆಗೂ ಅಂಥ ರಾಜ್ಯದಲ್ಲಿ ಸದರಿ ನಿಯಮಗಳು ಯಥೋಚಿತ ಬದಲಾವಣೆಗಳೊಂದಿಗೆ ಜಾರಿಯಲ್ಲಿರುವುದಾಗಿ ಭಾವಿಸತಕ್ಕದ್ದು.

(2) ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೇರೆಗೆ ರಚಿಸಿದ ಮಾದರಿ ನಿಯಮಗಳನ್ನು ಅವುಗಳನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಹಾಗೆ ಇರಿಸಿದ ಅಧಿವೇಶನದ ಅಥವಾ ಅದರ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಿದರೆ, ಅದು ಆ ತರುವಾಯ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರವೇ ಪರಿಣಾಮಕಾರಿಯಾಗತಕ್ಕದ್ದು. ಆದಾಗ್ಯೂ, ಅಂಥ ಮಾರ್ಪಾಟು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**38. ತೊಂದರೆಗಳನ್ನು ನಿವಾರಿಸಲು ಅಧಿಕಾರ.**–(1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ತೊಂದರೆಗಳನ್ನು ನಿವಾರಿಸಲು ಅವಶ್ಯವೆಂದು ಅಥವಾ ವಿಹಿತವೆಂದು ಕಂಡುಬರುವ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ರಾಜ್ಯದಲ್ಲಿ ಈ ಅಧಿನಿಯಮವು ಪ್ರಾರಂಭವಾದ ಮೂರು ವರ್ಷಗಳ ಅವಧಿ ಮುಕ್ತಾಯವಾದ ತರುವಾಯ, ಆ ರಾಜ್ಯಕ್ಕೆ ಸಂಬಂಧಪಟ್ಟಂತೆ ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

**39. ವಿನಾಯಿತಿ ನೀಡಲು ಅಧಿಕಾರ.–** (1) ಸಮುಚಿತ ಸರ್ಕಾರವು, ಕಾರಣಗಳನ್ನು ದಾಖಲಿಸಿ, ರಾಜಪತ್ರದಲ್ಲಿ ಪ್ರಕಟಿಸಿದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಮತ್ತು ವಿಧಿಸಬಹುದಾದಂಥ ಷರತ್ತುಗಳು ಯಾವುದಾದರೂ ಇದ್ದರೆ, ಅವುಗಳಿಗೆ ಒಳಪಟ್ಟು ಯಾವುದೇ ಪ್ರದೇಶಕ್ಕೆ ಅಥವಾ ಕಟ್ಟಡಗಳ ಪ್ರವರ್ಗಕ್ಕೆ ಅಥವಾ ವ್ಯಕ್ತಿಗಳ ವರ್ಗಕ್ಕೆ ಈ ಅಧಿನಿಯಮದ ಯಾವುವೇ ಉಪಬಂಧಗಳು ಅನ್ವಯವಾಗದಂತೆ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಿದ ಯಾವುದೇ ನಿಯಮದಲ್ಲಿ, ಮಾಡಿದ ಯಾವುದೇ ಆದೇಶದಲ್ಲಿ, ಹೊರಡಿಸಿದ ಯಾವುದೇ ಅಧಿಸೂಚನೆಯಲ್ಲಿ, ಉಪ–ವಿಧಿಗಳಲ್ಲಿ ಅಥವಾ ಅದರ ಮೇರೆಗೆ ರೂಪಿಸಿದ ಯಾವುದೇ ಸ್ಕೀಂನಲ್ಲಿ ಒಳಗೊಂಡಿರುವ ಯಾವುದೇ ನಿರ್ದಿಷ್ಟ ಅಗತ್ಯತೆಯನ್ನು ಪಾಲಿಸದಂತೆ ವಿನಾಯಿತಿ ನೀಡಬಹುದು ಅಥವಾ ಅಂಥ ವರ್ಗವು ಅಥವಾ ವರ್ಗಗಳು ಅಂಥ ಯಾವುದೇ ಅಗತ್ಯತೆಯನ್ನು ಪಾಲಿಸುವುದನ್ನು ಒಂದು ಸಲಕ್ಕೆ ಆರು ತಿಂಗಳುಗಳು ಮೀರದ ಅವಧಿಯವರೆಗೆ ಬಿಟ್ಟುಬಿಡಬಹುದು.

(2) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ಸಾಮಾನ್ಯ ಅಥವಾ ವಿಶೇಷ ಆದೇಶವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅಥವಾ ರಾಜ್ಯ ವಿಧಾನಮಂಡಲವು ಎರಡು ಸದನಗಳನ್ನು ಒಳಗೊಂಡಿರುವಲ್ಲಿ ಅದರ ಪ್ರತಿಯೊಂದು ಸದನದ ಮುಂದೆ, ಅಥವಾ ರಾಜ್ಯ ವಿಧಾನಮಂಡಲವು ಒಂದೇ ಸದನವನ್ನು ಒಳಗೊಂಡಿರುವಲ್ಲಿ ಆ ಸದನದ ಮುಂದೆ ಮಂಡಿಸತಕ್ಕದ್ದು.

**ಡಾ. ಜಿ. ನಾರಾಯಣ ರಾಜು**
ಕಾರ್ಯದರ್ಶಿ
ಭಾರತ ಸರ್ಕಾರ

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು, ಪಿ7, ಪ್ರ:200, ಕಾ.ಸೂ. ಪಿ–10, ದಿ:15-6-2020